ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದನ್ನು ತಮ್ಮ ಗಮನಕ್ಕೆ ತರಬೇಕಾದರೆ ನಾವು ಹದಿನೈದು ದಿವಸಗಳಿಂದ ಇದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ತಾವು ತಂದಿದ್ದು ಒಳ್ಳೆಯದೇ ಆಗಿದೆ, ತಮ್ಮ ಸಹಕಾರ ನಮಗೆ ಸಿಕ್ಕಿದೆ. ಇದರ ಬಗ್ಗೆ ಚಿಂತನೆ ಮಾಡತಕ್ಕಂಥ ವ್ಯವಸ್ಥೆ ನಮಗೆ ಇಲ್ಲದಿದ್ದರೆ ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು? ಅದರ ಅವಶ್ಯಕತೆ ಇಲ್ಲ. ರಾಜ್ಯದ ಎಲ್ಲಾ ಮಕ್ಕಳ ಹಿತರಕ್ಷಣೆ ಮಾಡತಕ್ಕಂಥ ಕೆಲಸ, ಜವಾಬ್ದಾರಿಯಿಂದ ತಾವು ಮಾಡಿದ್ದೀರಿ; ನಾವೂ ಮಾಡಿದ್ದೇವೆ. ನಮ್ಮೆಲ್ಲರಿಂದಾಗಿ ಇದು ನಡೆದಿರತಕ್ಕಂಥಾದ್ದು. ತಾವು ಹೇಳಿದಮೇಲೆ ನಾವು ಇದನ್ನು ಮಾಡಿದ್ದೇವೆ ಎನ್ನುವುದಲ್ಲ. ತಾವು ಹೇಳಬೇಕಾದುದನ್ನು ಹೇಳಿದ್ದೀರಿ. ನಾವು ಕಿವಿಯಲ್ಲಿ ಕೇಳಿದ್ದೇನೆ, ಕೃತಿಯಲ್ಲಿ ತಂದಿದ್ದೇನೆ. ಇದಕ್ಕಾಗಿ ನಿಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು : ತಮಗೆ ತುಂಬು ಹೃದಯದ ಅಭಿನಂದನೆಗಳು.

ಶ್ರೀ ಕೆ.ಎಸ್. ಈಶ್ವರಪ್ಪ : ನಾನೂ ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಒಟ್ಟಿನಲ್ಲಿ ಸಮಸ್ಯೆಯನ್ನು ಬಗೆಹರಿಸಿದ ತಮಗೆ ಅಭಿನಂದನೆಗಳು.

ಅಧ್ಯಕ್ಷರು : ಬೈರೇಗೌಡರೇ, ಈಗ ಊಟಕ್ಕೆ ಹೋಗಿ ಬಂದುಬಿಡೋಣ್ವಾ? ಆದರೆ ಬೈರೇಗೌಡರು ತಮ್ಮ ಒಬ್ಬರದು ಪೂರೈಸಿಬಿಡಲಿ ಎಂದು ಮಾನ್ಯ ತಿಮ್ಮಪ್ಪನವರು ಭಾವಿಸುತ್ತಿದ್ದಾರೆ. ಎರಡು ಗಂಟೆಯೊಳಗೆ ಮುಗಿಯಬಹುದಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೂ ಕ್ಲಾರಿಫಿಕೇಷನ್ ಆಗಬೇಕು. ನಮಗೆ ಹೊಟ್ಟೆ ಹಸಿಯುತ್ತಾ ಇದೆ.

ಅಧ್ಯಕ್ಷರು : ಹಾಗಾದರೆ ಈಗ ಅಡ್ಜರ್ನ್ ಮಾಡೋಣ. ವಿರೋಧಪಕ್ಷದ ನಾಯಕರು ಹಸಿವು ಎಂದು ಹೇಳುತ್ತಿದ್ದಾರೆ. ಈಗ ಸದನವನ್ನು ಮುಂದೂಡಿ ಪುನಃ 3 ಗಂಟೆಗೆ ನಾವು ಸಮಾವೇಶಗೊಳ್ಳುತ್ತೇವೆ.

(ಸದನವು 1- 46 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3 -20 ಗಂಟೆಗೆ ಪುನಃ ಸಮಾವೇಶಗೊಂಡಿತು. ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಮಾಮನಿಯವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೃಷಿ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ (ಮುಂದುವರಿದ ಉತ್ತರ)

+ ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಆಗ ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುತ್ತಿದ್ದೆ. ಧಾರವಾಡದ ಕೃಷಿ ವಿಶ್ವವಿದ್ಯಾನಿಲಯ ಈ ರಾಜ್ಯದ ಕೃಷಿಗೆ ಮಹತ್ತರವಾದ ಕೊಡುಗೆಯನ್ನು ನೀಡಿದೆ. ಅಲ್ಲಿನ ವಿಜ್ಞಾನಿಗಳಾಗಿರತಕ್ಕಂಥವರು ಬಹಳ ಶ್ರದ್ಧೆ ವಹಿಸಿ ಕರ್ತವ್ಯವನ್ನು ಮಾಡಿರುವ ಕಾರಣದಿಂದ ಆ ಭಾಗದ ರೈತರಿಗೆ ಮಹತ್ತರವಾದಂಥ

ಕೊಡುಗೆಯನ್ನು ನೀಡಿದ್ದಾರೆ. ನಾನು ಆಗ ಹತ್ತಿ ಬೆಳೆಯ ಬಗ್ಗೆ ಈ ಸಭೆಯ ಗಮನಕ್ಕೆ ತಂದಿದ್ದೆ. ಈ ದೇಶದಲ್ಲಿ ಸಂಕರ ಜಾತಿಯ ಹತ್ತಿಯನ್ನು ಬೆಳೆಯುವುದರಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿರತಕ್ಕಂಥವರು ಹತ್ತಿಯ ವಿಚಾರದಲ್ಲಿ ಪ್ರಖ್ಯಾತ ವಿಜ್ಞಾನಿಯಾಗಿದ್ದವರು ಡಾ : ಕಾತರಕಿ ಎಂಬುವರು ಅವರ ಹೆಸರು ತಮಗೆಲ್ಲರಿಗೂ ಗೊತ್ತಿದೆ ಮತ್ತು ಈ ಸಂದರ್ಭದಲ್ಲಿ ನಾನು ಅವರನ್ನು ಸ್ಮರಿಸುತ್ತೇನೆ. ಅದು ನನ್ನ ಕರ್ತವ್ಯ ಕೂಡ ಆಗಿದೆ.

ಉಪಾಧ್ಯಕ್ಷರು : ಮಾನ್ಯ ಸಚಿವರೇ, ಕಾತರಕಿಯವರಿಗೆ ಸರಕಾರದಿಂದ ಎಷ್ಟು ಪುರಸ್ಕಾರ ಸಿಗಬೇಕಾಗಿತ್ತು, ಅಷ್ಟು ಸಿಕ್ಕಿಲ್ಲ. ಅವರು ಇಡೀ ರಾಷ್ಟ್ರದಲ್ಲಿಯೇ ಉದ್ದ ಎಳೆಯ ಹತ್ತಿ ಬೀಜವನ್ನು ಕಂಡುಹಿಡಿದವರು.

ಶ್ರೀ ಚಂದ್ರಕಾಂತ್ ಬೆಲ್ಲದ : ಡಾ : ಕಾತರಕಿಯವರು 1973ರಲ್ಲಿಯೇ ಹೆಚ್-4 ಕಂಡು ಹಿಡಿದಂಥ ಪಟೇಲರಿಗೆ ಗುಜರಾತ್ ಸರಕಾರದ ಮನ್ನಣೆ ಸಿಕ್ಕಿತು ಮತ್ತು ಕೇಂದ್ರ ಸರಕಾರದ ಪುರಸ್ಕಾರ ಮತ್ತು ಮನ್ನಣೆ ಸಿಕ್ಕಿತು. ಆ ಒಂದು ಪುರಸ್ಕಾರವು ಡಾ : ಕಾತರಕಿಯವರಿಗೆ ಸಿಗಲಿಲ್ಲ ಎಂಬ ಮಾತು ಇದೆ. ಈಗಲೂ ಕೂಡ ಅವರ ಪ್ರಯೋಜನವನ್ನು ಪಡೆಯಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಅವರು ನಿವೃತ್ತಿ ಹೊಂದಿದ್ದಾರೆ. ಅವರ ಪ್ರಯೋಜನವನ್ನು ಯಾವರೀತಿಯಲ್ಲಿ ಪಡೆಯಬೇಕೆನ್ನುವುದರ ಬಗ್ಗೆ ನಾನು ಈಗ ಏನೂ ಹೇಳಬಯಸುವುದಿಲ್ಲ. ಅವರಿಗೆ ಸೂಕ್ತ ಪುರಸ್ಕಾರ ದೊರೆಯ ಬೇಕೆಂದು ಹೇಳುವುದರಲ್ಲಿ ಅರ್ಥವಿದೆ. ಅದನ್ನು ಸರಕಾರವು ಗಮನಿಸುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಎರಡೂ ಕೃಷಿ ವಿದ್ಯಾನಿಲಯಗಳಲ್ಲಿ ನಾವು ಮಹತ್ತರವಾದ ಬದಲಾವಣೆಗಳನ್ನು ಮಾಡಿದ್ದೇವೆ. ಒಂದನೆಯದಾಗಿ ಪ್ರವೇಶ ಪಡೆಯತಕ್ಕಂಥ ಸಂದರ್ಭದಲ್ಲಿ ನಾನು ಸಚಿವನಾದ ಕೇವಲ 8-10 ದಿನಗಳಿಗಿಂತ ಮೊದಲನೆಯ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶವು ನಡೆದಿತ್ತು. ಅದರಲ್ಲಿ ಸಂದರ್ಶನದ ಮೂಲಕ ಅಂಕಗಳನ್ನು ಕೊಟ್ಟು ಪ್ರವೇಶವನ್ನು ನೀಡುತ್ತಿದ್ದರು. ಅದರಲ್ಲಿ ಒಂದು ಆಶ್ಚರ್ಯದ ಸಂಗತಿ ಅಂದರೆ, ಕೆಲವು ವಿದ್ಯಾರ್ಥಿಗಳಿಗೆ ಸಂದರ್ಶನದಲ್ಲಿ ನೂರಕ್ಕೆ ನೂರು ಅಂಕಗಳು ಇದ್ದರೆ, ಇನ್ನು ಕೆಲವರಿಗೆ 98 ಕೊಟ್ಟಿದ್ದಾರೆ. ಇನ್ನು ಕೆಲವರಿಗೆ ಕೇವಲ ಐದು ಅಂಕಗಳನ್ನು ಕೊಟ್ಟಿದ್ದಾರೆ. ಈ ಐದು ಅಂಕಗಳನ್ನು ಸಂದರ್ಶನದಲ್ಲಿ ಪಡೆದಂಥವರು ಕ್ವಾಲಿಫೈಯಿಂಗ್ ಎಕ್ಸಾಮಿನೇಷನ್‌ನಲ್ಲಿ ಅತೀ ಹೆಚ್ಚು ಪಡೆದಿದ್ದಾರೆ. ಸಂದರ್ಶನದಲ್ಲಿ 98 ಅಂಕಗಳನ್ನು ಪಡೆದಿರತಕ್ಕಂಥವರು ಕ್ವಾಲಿಫೈಂಗ್ ಎಕ್ಸಾಮಿನೇಷನ್‌ನಲ್ಲಿ ಕಡಿಮೆ ಅಂಕಗಳನ್ನು ಪಡೆದಿದ್ದಾರೆ. ವಿಶ್ವವಿದ್ಯಾನಿಲಯ ಅಂದರೆ ಅದು ಟೆಂಪಲ್ ಆಫ್ ನಾಲೆಡ್ಜ್ ಎಂದು ಹೇಳುತ್ತಾರೆ. ಆದರೆ ಅಲ್ಲಿಯೂ ಕೂಡ ಇಂಥ ಏರುಪೇರುಗಳನ್ನು ಮಾಡತಕ್ಕಂಥದ್ದನ್ನು ನಾನು ಕಂಡುಹಿಡಿದ ತತ್‌ಕ್ಷಣ ಅದನ್ನು ತೆಗೆಯಬೇಕೆಂದು ಇವೊತ್ತು ಪ್ರವೇಶ ಪಡೆಯುವಲ್ಲಿ ಈ ಸಂದರ್ಶನಕ್ಕೆ ಅಂಕಗಳು ಇಲ್ಲ. ವಿದ್ಯಾರ್ಥಿಗಳು ಅವರ ಪ್ರತಿಭೆಯ ಮೂಲಕ ಮಾತ್ರ ಇವೊತ್ತು ಪ್ರವೇಶವನ್ನು ಪಡೆಯತಕ್ಕಂಥ ಅವಕಾಶವನ್ನು ಒದಗಿಸಿಕೊಟ್ಟಿದ್ದೇವೆ. ಬಹುಶಃ

ಇದು ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲಿಯೂ ಕೂಡ ಇಲ್ಲ. ಆ ವಿದ್ಯಾರ್ಥಿಯಾಗಿರತಕ್ಕಂಥವನೇ ಪ್ರವೇಶವನ್ನು ಪಡೆಯಲು ಅರ್ಹತೆಯನ್ನು ಪಡೆಯ ಬೇಕೇ ವಿನಹ ಸಂದರ್ಶನದಲ್ಲಿ ನಮ್ಮಂಥವರು, ನಿಮ್ಮಂಥವರು ಸಂದರ್ಶನದಲ್ಲಿ ಅಂಕಗಳನ್ನು ಕೊಟ್ಟು ಅವರಿಗೆ ಪ್ರವೇಶ ನೀಡತಕ್ಕಂಥಾದ್ದು ಸೂಕ್ತ ಅಲ್ಲ ಎಂಬುದನ್ನು ತೀರ್ಮಾನ ಮಾಡಿ ಮೆರಿಟ್ ಮೂಲಕ ಪ್ರವೇಶ ನೀಡುವ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಅದರ ಜೊತೆಯಲ್ಲಿ ಇಲ್ಲೂ ಬಹಳ ಸಲ ಚರ್ಚೆಯಾಗುತ್ತಿದೆ. ಅನೇಕ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಅವರ ಪ್ರತಿಭೆ ಬಹಳ ಹಿಂದಕ್ಕೆ ಸರಿದು ಬೇರೆಬೇರೆ ಆಧಾರಗಳ ಮೂಲಕ ನೇಮಕಗೊಳ್ಳುವ ಸಂದರ್ಭಗಳೂ ಉಂಟು. ಅದನ್ನು ತೆಗೆದು ಇನ್ನು ಮುಂದೆ ಎರಡೂ ಕೃಷಿ ವಿವಿಗಳಲ್ಲಿ ಪ್ರತಿಭೆ ಆಧರಿಸಿಯೇ ನೇಮಕ ಮಾಡಬೇಕೆಂಬ ತೀರ್ಮಾನ ಮಾಡಿದ್ದೇವೆ. ಜೊತೆಗೆ ಒಂದು ಸಾರಿ ಒಬ್ಬರು ಒಂದು ಸ್ಥಾನಕ್ಕೆ ನೇಮಕವಾದಾಗ, ಅವರು ಗೋಲ್ಡ್‌ಮೆಡಲಿಸ್ಟ್ ಇರಬಹುದು ಅಥವಾ ಇನ್ನೇನೋ ಇರಬಹುದು, ಅದನ್ನೇ ತೋರಿಸಿಕೊಂಡು ಅವರು ಕಡೆಯವರೆಗೂ ನೇಮಕಾತಿ ಅವಕಾಶ ಪಡೆಯುತ್ತಿದ್ದರು. ಅದನ್ನು ತೆಗೆದು, ಒಬ್ಬರು ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನೇಮಕವಾದ ಮೇಲೆ ಅವನ ಸಾಧನೆ ಏನು ಎಂದು ನೋಡಿ ಅದನ್ನೇ ಬಡ್ತಿಗೆ ಪರಿಗಣಿಸಬೇಕೆಂಬ ಬದಲಾವಣೆಯನ್ನೂ ಮಾಡಿದ್ದೇವೆ. ಅಲ್ಲದೆ ವಿದ್ಯಾರ್ಥಿಗಳಿಗೆ ಗ್ರಾಮೀಣ ಅರಿವು ಮತ್ತು ವಾಸ್ತವ ಕೃಷಿ ಬಗ್ಗೆ ಒಂದು ಕಲ್ಪನೆ ಅನುಭವ ಅವರಿಗಿರುತ್ತಿರಲಿಲ್ಲ. ಅದ್ದರಿಂದ ಒಂದು ಸಂಸ್ಥೆ, ಪೂರ್ತಿಯಾಗಿ ಅವರು ಗ್ರಾಮೀಣ ಪ್ರದೇಶದಲ್ಲಿ ಇರಬೇಕು, ರೈತರ ಜೊತೆ ಇವರೂ ನೇಗಿಲು ಹಿಡಿದು ಉಳಬೇಕು ಪೈರು ನಾಟಿ ಮಾಡಬೇಕು ಇದಕ್ಕೆ ಅಂಕಗಳನ್ನೂ ಇಡಲಾಗಿದೆ. ಇದರಿಂದ ಅವರು ಕೃಷಿಪದವೀಧರರಾಗಿ ಹೊರಗೆ ಬಂದ ಮೇಲೆ ಸ್ವತಃ ಕೃಷಿಕರಾಗುವ ಶಕ್ತಿ ಬರುವುದಲ್ಲದೆ, ತನ್ನ ಕಾಲ ಮೇಲೆ ತಾನು ನಿಲ್ಲುವವರಾಗಿರಬೇಕು ಮತ್ತು ಎಲ್ಲಾ ಜ್ಞಾನವನ್ನೂ ಪಡೆದಿರಬೇಕು ಎಂಬ ಉದ್ದೇಶದಿಂದ ಇಂತಹ ಬದಲಾವಣೆಗಳನ್ನು ತಂದಿದ್ದೇವೆ. ಇನ್ನು ರಿಸರ್ಚ್‌ಗೆ ಹಣ ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ. ನಿಜ, ಎರಡು ಕೃಷಿ ವಿವಿಗಳಿಗೆ ನಾವು ನೀಡುತ್ತಿರುವ ಹಣ ಕಡಿಮೆ. ಆದರೆ ರಿಸರ್ಚ್‌ಗೆ ಹಣ ಕಡಿಮೆಮಾಡಿಲ್ಲ; ಧಾರವಾಡ ಕೃಷಿ ವಿವಿಯಲ್ಲಿ 95-96ರಲ್ಲಿ ನೀಡಲಾದ ಒಟ್ಟು ಅನುದಾನದಲ್ಲಿ ಶೇಕಡ 29.63, ರೀಸರ್ಚ್‌ಗೆ ಹೋಗಿದೆ 96-97ರಲ್ಲಿ ಶೇಕಡ 27.22 ಆಯಿತು. 97-98ರಲ್ಲಿ 36.53 ಆಗಿದೆ. ಇದರಿಂದ ಕಡಿಮೆಯಾಗುತ್ತಿಲ್ಲವೆಂಬುದು ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಧಾರವಾಡ ಬೆಂಗಳೂರುಗಳಲ್ಲಿರುವ ಕೃಷಿ ವಿವಿಗಳ ಜೊತೆಗೆ ಬೇರೆ ಬೇರೆ ಕಡೆ ಮಾಮೂಲಿ ವಿವಿಗಳನ್ನು ಮಾಡುವ ಬದಲು ಇವನ್ನು ಮಾಡಿ.

ಶ್ರೀ ಸಿ. ಬೈರೇಗೌಡ : ಶಿವಮೊಗ್ಗದಲ್ಲಿ ಆಗಲೇ ಕೃಷಿ ಕಾಲೇಜ್ ಇದೆ. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಹೆಚ್ಚು ಕೃಷಿ ವಿವಿಗಳನ್ನು ಸ್ಥಾಪಿಸಲು ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೆ ಶುಗರ್‌ಫ್ಯಾಕ್ಟರಿಗೆ ಕೊಟ್ಟಿದ್ದು ವಾಪಾಸ್ ತೆಗೆದುಕೊಂಡಿರುವ ಸರ್ಕಾರದ ಎರಡೂವರೆ ಸಾವಿರ ಎಕರೆ ಭೂಮಿ ಅಲಿ ಹಾಗೆಯೇ ಬಿದ್ದಿದೆ.

ಅಲ್ಲಿ ಅಪರೂಪವಾದ ಕಾಲೇಜು ಕೊಡಿ ಅಂದರೆ ಇವರು ಕಥೆ ಹೇಳುತ್ತಾರೆ ಅದಿಲ್ಲ, ದುಡ್ಡಿಲ್ಲ ಎಂದು ಅದಕ್ಕೊಂದು ಕಟ್ಟಡ ಕಟ್ಟಿಲ್ಲ.

ಶ್ರೀ ಸಿ. ಬೈರೇಗೌಡ : ವಿಶ್ವವಿದ್ಯಾಲಯ ಮಾಡಲು ಆಗುವುದಿಲ್ಲ ಎಂದು ನಾನು ಹೇಳಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಯಚೂರಿನಲ್ಲಾದರೂ ಮಾಡಿ, ಅದರಿಂದ ಗುಲ್ಬರ್ಗ, ಬೀದರ್ ಕೊಪ್ಪಳ ರಾಯಚೂರುಗಳ ರೀಜನ್‌ಗೆ ಉಪಯೋಗವಾಗುತ್ತದೆ. ಜನರಲ್ ವಿವಿಗಳು ಪ್ರತಿ ಎರಡು ಮೂರು ಜಿಲ್ಲೆಗೊಂದರಂತೆ ಇವೆ. ಮಂಗಳೂರು ವಿಶ್ವವಿದ್ಯಾಲಯ, ಉಡುಪಿ ಮಂಗಳೂರು ಕೊಡಗು ಜಿಲ್ಲೆಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಚಿಕ್ಕಮಗಳೂರು ಜಿಲ್ಲೆಗಳಿಗೆ.

ಶ್ರೀ ಸಿ. ಬೈರೇಗೌಡ : ಪ್ರತಿ ಜಿಲ್ಲೆಗೊಂದರಂತೆ ಕೃಷಿ ಕಾಲೇಜು ಕೊಡಲು ಸರ್ಕಾರಕ್ಕೆ ಹಣಕಾಸಿನ ಕಾರಣದಿಂದ ಆಗುತ್ತಿಲ್ಲ. ಆದ್ದರಿಂದ ಪ್ರತಿ ಜಿಲ್ಲೆಯಲ್ಲೂ ಈ ಎರಡೂ ವಿಶ್ವವಿದ್ಯಾಲಯಗಳಿಗೆ ಹೊಂದಿಕೊಂಡಂತೆ ಒಂದೊಂದು ಕಾಲೇಜು ಇರಬೇಕೆಂಬುದು ನಮ್ಮ ನೀತಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಮುಖ್ಯಮಂತ್ರಿಗಳ ವಿಶೇಷ ಪ್ರೀತಿ ರಾಯಚೂರು ಮೇಲಿದೆ. ಅದಕ್ಕಾಗೇ ಅವರು ಕೊಪ್ಪಳದಿಂದ ಸ್ಪರ್ಧಿಸಿದ್ದು. ಅದಕ್ಕಾಗಿ ಐದು ಜಿಲ್ಲೆಗಳಾದರೂ ಅಲ್ಲಿ ವಿಶ್ವವಿದ್ಯಾಲಯ ಮಾಡುವುದಕ್ಕೆ ತೊಂದರೆ ಏನಿದೆ?

ಶ್ರೀ ಶ್ರೀರಂಗದೇವರಾಯಲು : ಅಧ್ಯಕ್ಷರೇ, ಗಂಗಾವತಿಯಲ್ಲಿ ಸರ್ಕಾರಿ ಕಟ್ಟಡಗಳು ಐಡ್ಲಾಗಿ ಬಿದ್ದಿವೆ. ಅಲ್ಲಿ ಪ್ಯಾಡಿಕ್ರಾಫ್ಸ್ ಇಳುವರಿ ಬಹಳ ಕಡಿಮೆಯಾಗಿದೆ. ಅಲ್ಲಿ ಏತಕ್ಕಾಗಿ ಒಂದು ರೀಸರ್ಚ್ ಸೆಂಟರ್ ಮಾಡಬಾರದು? ಇಳುವರಿ ಏಕೆ ಕಡಿಮೆಯಾಗಿದೆ ಎಂಬುದನ್ನೂ ರೈತರಿಗೆ ತಾವು ತೋರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಉಪಾಧ್ಯಕ್ಷರೇ, ಅವರ ಬೇಡಿಕೆ ಸಾಧುವಾದುವಾದಂಥದ್ದು ಹಾಗೂ ಅವಶ್ಯಕತೆಯೂ ಸಹ ಇದೆ. ಆದರೆ ಸರ್ಕಾರದ ಖಜಾನೆಯಲ್ಲಿ ಹಣವೂ ಇರಬೇಕಾಗುತ್ತದೆ. ಜಿಲ್ಲೆಗೆ ಎರಡೂ ಕೃಷಿ ವಿಶ್ವವಿದ್ಯಾನಿಲಯಗಳಿಂದ ಯಾವುದಾದರೂ ಒಂದು ಕಾಲೇಜನ್ನು ಸ್ಥಾಪನೆ ಮಾಡಬೇಕೆಂಬ ನೀತಿಗೆ ನಾವು ಒಪ್ಪಿದ್ದೇವೆ. ಅಲ್ಲಿ ರಿಸರ್ಚ್ ಸೆಂಟರ್ ಆಗಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ಒಂದು ಸಂದರ್ಭದಲ್ಲಿ ನಾನು ಒಂದು ಆಲೋಚನೆ ಮಾಡಿದ್ದೆ. ಈ ಕೃಷಿ ಉತ್ಪನ್ನಗಳ ಮೇಲೆ ಯಾವ ರೀತಿಯಾದರೂ ಒಂದು ಸೆಸ್ ಹಾಕಿ ಆ ಹಣವನ್ನು ಕೃಷಿ ರಿಸರ್ಚ್‌ಗೆ ಕೊಡಬೇಕೆಂಬುದು ನನ್ನ ವೈಯಕ್ತಿಕವಾದಂಥ ಆಲೋಚನೆ. ಈಗ ಇರುವ ಹಣಕಾಸಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ವಿಚಾರವನ್ನು ನಾನು ಸದನಕ್ಕೆ ಬಿಡುತ್ತೇನೆ. ನೀವು ಆ ರೀತಿಯಾಗಿ ಎಲ್ಲರೂ ಒಪ್ಪುವುದಾದರೆ ಈ [illegible] ಅಧಿವೇಶನದಲ್ಲಿ ಅದಕ್ಕೆ ತಕ್ಕ ಮಸೂದೆಯನು ತಂದು ಈ

ರೀಸರ್ಚ್ ಆಗಲೇಬೇಕಾಗಿರುವ ಕಾರಣದಿಂದ ಹಣದ ಕೊರತೆಯಿಂದ ಸಾಧ್ಯವಾಗುತ್ತಿಲ್ಲವಾದ ಕಾರಣದಿಂದ ಇದನ್ನು ಸದನದ ಮುಂದೆ ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಸಂಶೋಧನೆಗೆ ಪ್ರಾಮುಖ್ಯತೆಯನ್ನು ಕೊಡಬೇಕು ಎನ್ನುವ ಬಗ್ಗೆ ವಿಚಾರ ಮಾಡಬೇಕು ಎಂದು ನಾವು ಹೇಳಿದ್ದೇವೆ. ಆ ಪ್ರಕಾರ ಎಪಿಎಂಸಿ ಯಲ್ಲಿ ಸಾಕಷ್ಟು ಹಣ ಇದೆ. ಅದು ರೈತರಿಂದ ಕೃಷಿ ಉತ್ಪಾದನೆಗಳಿಂದ ಬಂದ ಸೆಸ್. ಅದರಲ್ಲಿ ಕೆಲವು ಭಾಗ ರೀಸರ್ಚ್‌ಗೆ ಹೋಗಬೇಕು ಎಂದು ತಮ್ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಉಪಾಧ್ಯಕ್ಷರೇ, ಎರಡು ವಿಶ್ವವಿದ್ಯಾನಿಲಯಗಳಿಗೆ ಸಮನಾಗಿ ಹಣವನ್ನು ಕೊಡುವ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಬಹುತೇಕ ಮಾನ್ಯ ಶಾಸಕರಾದ ಬೆಲ್ಲದ್‌ರವರು ಅದರ ಬಗ್ಗೆ ಪ್ರಸ್ತಾಪಮಾಡಿದರು. ಈ ಎರಡು ವಿಶ್ವವಿದ್ಯಾನಿಲಯಗಳಿಗೆ ಸಮಸಮನಾಗಿ ಹಣ ಬರುವುದು ನಿಜ. ನಾನು ಆಡಳಿತ ಮಂಡಳಿಯಲ್ಲಿ ಇದ್ದೆ. ಸುಮಾರು 27 ಕೋಟಿ ಧಾರವಾಡಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ 27 ಕೋಟಿ ರೂಪಾಯಿ ಬಜೆಟನ್ನು ತಯಾರು ಮಾಡಿದರೂ ಆ ವಿಶ್ವವಿದ್ಯಾನಿಲಯಕ್ಕೆ ವರ್ಷಕ್ಕೆ ಬರುವುದು ಸುಮಾರು 17 ಕೋಟಿ ರೂಪಾಯಿ. ಆದರೆ ಆ ವಿಶ್ವವಿದ್ಯಾನಿಲಯ ನೂತನವಾಗಿ ಸುಮಾರು ಹತ್ತು ವರ್ಷಗಳ ಹಿಂದೆ ಸ್ಥಾಪನೆಯಾದ್ದರಿಂದ ಅದಕ್ಕೆ ಬೇಕಾದ ಇನ್‌ಪ್ರಾಸ್ಟ್ರಕ್ಚರ್, ರೀಸರ್ಚ್ ವರ್ಕ್, ರಿಕ್ರೂಟ್‌ಮೆಂಟ್, ಎಸ್ಟಾಬ್ಲಿಷ್‌ಮೆಂಟ್ ಎಲ್ಲಾ ಖರ್ಚನ್ನೂ ಅದರಲ್ಲೇ ನಿಭಾಯಿಸಬೇಕಾಗುತ್ತದೆ. ಅದೇ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಇಲ್ಲಿ ಈಗಾಗಲೇ ಇನ್‌ಫ್ರಾಸ್ಟ್ರಕ್ಚರನ್ನು ಮಾಡಿಕೊಂಡಿದ್ದಾರೆ. ಹೆಚ್ಚಿನ ಹಣ ರೀಸರ್ಚ್‌ಗೆ ಇಲ್ಲಿ ಸಿಗುವ ಸಾಧ್ಯತೆ ಇದೆ. ಅದಕ್ಕಾಗಿ ನಾವು ಪದೇ ಪದೇ ಕೃಷಿ ಸಚಿವರನ್ನು ಮತ್ತು ಸರ್ಕಾರಕ್ಕೆ ಕೇಳುತ್ತಿದ್ದೇವೆ. ಹೆಚ್ಚಿನ ಹಣ ಕೊಡದಿದ್ದರೆ ಅಲ್ಲಿ ಬಿಲ್ಡಿಂಗ್ ಇಲ್ಲ, ರೀಸರ್ಚ್ ಮಾಡಲಿಕ್ಕೆ ಸಾಕಷ್ಟು ಹಣ ಇಲ್ಲ, ಐಸಿಎಆರ್ ನಿಂದ ಬರುವುದು ಮತ್ತು ಬೇರೆ ಖಾಸಗಿ ವಲಯದಿಂದ ಬರುವಂಥ ಹಣದ ಮೂಲಕ ರೀಸರ್ಚ್ ಮಾಡುವ ಸಂದರ್ಭ ಇವತ್ತು ಇದೆ. ದಯವಿಟ್ಟು ಆಯ್ಕೆಯಿಂದ ಹುದ್ದೆಗಳನ್ನು ತುಂಬಿದ್ದರೂ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಎರಡಕ್ಕೂ ಸರಿದೂಗಿಸುವಷ್ಟು ಹಣವನ್ನು ಒದಗಿಸದಿದ್ದರೆ ಆ ವಿಶ್ವವಿದ್ಯಾನಿಲಯ ಬೆಳೆಯುವುದಿಲ್ಲ ಎಂದು ಕೃಷಿ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಸಿ. ಬೈರೇಗೌಡ : ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ ಬಹಳ ವರ್ಷವಾಗಿದೆ. ಇಲ್ಲಿ ಯೋಜನೆ ಮತ್ತು ಯೋಜನೇತರ ಎಂದು ವಿಭಾಗ ಮಾಡಿದಾಗ ಇಲ್ಲಿ ಯೋಜನೇತರದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಹಣ ದೊರಕುತ್ತಿದೆ. ಅವರು ಹೇಳಿದ ಹಾಗೆ ಇದು ಬಹಳ ಹಿಂದೆ ಪ್ರಾರಂಭವಾಗಿರತಕ್ಕಂಥದ್ದು. ಮೊದಲು ಯೋಜನೆಯಲ್ಲಿದ್ದಂಥ ಕೆಲವು ಯೋಜನೆಗಳು ಏನಿವೆ, ಅವು ಈಗ ಯೋಜನೇತರ ಆಗಿವೆ. ಆ ಕಾರಣದಿಂದ ಇಲ್ಲಿ ಹೆಚ್ಚಿಗೆ ಹಣ ಬೇಕಾಗಿರುವ ಅವಶ್ಯಕತೆ ಇದೆ. ಆದರೆ ಈ ಯೋಜನೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕಿಂತ

ಧಾರವಾಡ ಕೃಷಿ ವಿಶ್ವ ವಿದ್ಯಾಲಯಕ್ಕೆ ಈ ಯೋಜನೆಯಲ್ಲಿ ಯೋಜನೆ ಬಾಬ್ತಿನಲ್ಲಿ ಹೆಚ್ಚಿನ ಹಣ ಕೂಡ ದೊರಕುತ್ತಿದೆ. ಅದರಲ್ಲಿ ಅವಶ್ಯಕತೆಗೆ ತಕ್ಕಂತೆ ಬೇಕಾಗಿರುವಷ್ಟು ಹಣವನ್ನು ನಾವು ಕೊಡುತ್ತಿದ್ದೇವೆ. ಎನ್ನುವ ವಾದವಲ್ಲ. ಅದು ಇನ್ನೂ ಹೆಚ್ಚಿನ ಅವಶ್ಯಕತೆ ಇದೆ ಎಂದು ನಾನು ಒಪ್ಪಿಕೊಂಡಿದ್ದೇನೆ. ಭತ್ತದಲ್ಲಿ ಸಂಕೀರ್ಣ ಜಾತಿ ತಳಿಗಳನ್ನು ಬಿಡುಗಡೆ ಮಾಡಿರತಕ್ಕಂಥದ್ದರಲ್ಲೂ ಕರ್ನಾಟಕವೂ ಸಹ ಒಂದು ಪ್ರಮುಖವಾದ ಸ್ಥಾನದಲ್ಲಿದೆ ಈಗಾಗಲೇ ಎರಡು ಹೈಬ್ರಿಡನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಬಿಡುಗಡೆ ಮಾಡಿದೆ. ಕೆಆರ್ಎಸ್ಎಚ್ 1 ಮತ್ತು ಕೆಆರ್ಎಸ್ಎಚ್ 2 ಎಂದು. ಮತ್ತೆ ಅದರ ಜೊತೆಗೆ ರಾಗಿಯಲೂ ಉತ್ತಮವಾದ ತಳಿಯನ್ನು ಜಿಪಿಯು 28 ಮತ್ತು ಜಿಪಿಯು 26 ಎಂದು ಸಹಾ ಬಿಡುಗಡೆ ಮಾಡಿದೆ. ಅದರ ಜೊತೆಗೆ ಹಲಸಂದಿ ಮತ್ತು ಹುರುಳಿಗೂ ಕೂಡ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಹೊಸ ತಳಿಗಳಿಂದ ಗುಣವೇನು?

ಶ್ರೀ ಸಿ. ಭೈರೇಗೌಡ : ಶೇಕಡ 30 ರಷ್ಟು ಉತ್ಪಾದನೆ ಜಾಸ್ತಿ ಬರುತ್ತದೆ. ಅದರ ಜೊತೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಒಣ ಬೇಸಾಯಕ್ಕೆ ತಕ್ಕಂತೆ ಬಹಳ ಒಂದು ಒಳ್ಳೆಯ ಕೆಲಸವನ್ನೂ ಕೂಡ ಮಾಡಿದ್ದಾರೆ. ಅಲ್ಲಿ ವಿಶಿಷ್ಟವಾದ ಒಂದು ಪ್ರಯೋಗ ನಡೆದಿದೆ. ಈ ಗೊಬ್ಬರವನ್ನು ಯಾವ ರೀತಿ ಬಳಕೆ ಮಾಡಬೇಕೆಂದು ಹೇಳಿ ಹೇಳಿದ್ದಾರೆ. ಬಹಳ ಮಾನ್ಯ ಸದಸ್ಯರುಗಳು ಏನಾಗುತ್ತಿದೆ ಭೂಮಿ ಗತಿ ಏನು ಎಂದು ಪ್ರಶ್ನೆ ಮಾಡಿದ್ದಾರೆ. ಅಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾಡಿರುವ ಒಂದು ಪ್ರಯೋಗದ ಪ್ರಕಾರ ಕೇವಲ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಅದು ಇಳುವರಿ ಕಡಿಮೆಯಾಗುತ್ತಿದೆ. ರಾಸಾಯನಿಕ ಗೊಬ್ಬರ ಮತ್ತು ತಿಪ್ಪೆ ಗೊಬ್ಬರ ಎರಡೂ ಸೇರಿದ ಕಡೆ ಇಳುವರಿ ಒಂದು ಸ್ಟೆಬಿಲೈಸ್ ಆಗುವುದೂ ಅಲ್ಲದೇ ಹೆಚ್ಚಾಗಿರುವುದು ಸಹಾ ಇವತ್ತು ನಾವು ಕಂಡುಹಿಡಿದಿದ್ದೇವೆ. ಕಳೆದ 18 ವರ್ಷಗಳಿಂದ ಈ ರೀತಿಯಾದ ಒಂದು ಪ್ರಯೋಗ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ. ಇದು ಒಣ ಬೇಸಾಯಕ್ಕೆ ಸಂಬಂಧಪಟ್ಟಿರುವುದು. ಮಳೆ ಆಶ್ರಿತ ಬೇಸಾಯಕ್ಕೆ ಸಂಬಂಧಪಟ್ಟಂತೆ ಮಹತ್ತರವಾದ ಒಂದು ಪ್ರಯೋಗವನ್ನು ಅಲ್ಲಿ ನಡೆಸಿದ್ದಾರೆ. ಇದರಿಂದ ರಾಸಾಯನಿಕ ಗೊಬ್ಬರ ಮತು ತಿಪ್ಪೆ ಗೊಬ್ಬರ ಎರಡೂ ಸೇರಿ ಒಂದು ಸಮ್ಮಿಶ್ರವಾಗಿರುವ ಗೊಬ್ಬರವನ್ನು ಒದಗಿಸುವುದರಿಂದ ಹೆಚ್ಚಿನ ಉತ್ಪಾದನೆಯನ್ನು ಸಾಧಿಸುವುದಕ್ಕೆ ಸಾಧ್ಯ ಇದೆ ಎನ್ನುವುದು ತಿಳಿದುಬಂದಿದೆ.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೆ, ನಾನು 8ನೇ ತಾರೀಖು ಮಾತನಾಡುವಾಗ ಮಾನ್ಯ ಸಚಿವರು ಹೇಳುವ ವಿಷಯದ ಬಗ್ಗೆ ನಾನು ತಿಳಿಸಿದ್ದೆ. ತಾವು ಏನು ಹ್ಯೂಮನ್ ವೇಸ್ಟ್ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಅನಿಮಲ್ ವೇಸ್ಟ್ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ನ್ಯಾಚುರಲ್ ವೇಸ್ಟ್ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ನೀವು ಬಹಳ ಶ್ರಮ ತೆಗೆದುಕೊಂಡು ನಿಮ್ಮ ಇಲಾಖೆಯಲ್ಲಿ ಉಪಯೋಗಿಸಿರುವ 11 ಲಕ್ಷ ಟನ್ ಫರ್ಟಿಲೈಜರನ್ನು ಈ ವರ್ಷ ನೀವು ಉಪಯೋಗಿಸಿದ್ದೀರಿ. 11.36 Lakh tones fertiliser has

been used to produce 93.47 lakh tonnes to food-grains. ಇದಕ್ಕೆ ಸಬ್ಸಿಡಿಯನ್ನು ಕೊಟ್ಟಿರುವುದು 253.55 ಕೋಟಿ ರೂಪಾಯಿಗಳು. ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಇವತ್ತು ಜನಸಂಖ್ಯೆ ಹೆಚ್ಚುತ್ತಾ ಇದೆ. ಹುಟ್ಟುವ ಮಕ್ಕಳಿಗೆ ವ್ಯಾಕ್ಸೀನ್ ಕೊಟ್ಟು ಉಳಿಸಬೇಕು. ಆಹಾರಧಾನ್ಯವೂ ಜಾಸ್ತಿ ಬೇಕು. 1951 ರಲ್ಲಿ 50 ಮಿಲಿಯನ್ ಟನ್ ಇದ್ದದ್ದು ದೇಶದಲ್ಲಿ ಇವತ್ತು 200 ಮಿಲಿಯನ್ ಟನ್ ಆಗಿದೆ. ನನ್ನ ಒಂದು ವಿನಂತಿ ಏನೆಂದರೆ whether it is possible to use human waste, animal waste, and natural waste instead of ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಈ ಭೂಮಿಯನ್ನು ಬರಡು ಮಾಡುತ್ತಿದ್ದೀರಿ. 8ನೇ ತಾರೀಖಿನ ದಿವಸ ನಾನು ಇದರ ಬಗ್ಗೆ ಮಾತನಾಡಿದ್ದೇನೆ. ನೀವು ಈಗ ಉತ್ತರ ಹೇಳುತ್ತಿದ್ದೀರಿ. ದಯವಿಟ್ಟು ಇದಕ್ಕೂ ಉತ್ತರ ಹೇಳಬೇಕು. ಆಮೇಲೆ ಇನ್ನೊಂದು ಪ್ರಶ್ನೆಯನ್ನು ನಾನು ಕೇಳಿದ್ದೆ. ರೂರಲ್ ಡೆವಲಪ್‌ಮೆಂಟ್ ಬಗ್ಗೆ ಕೇಳಿದಾಗ ನೀವು ಮತ್ತು ಎಂ.ಪಿ. ಪ್ರಕಾಶ್‌ರವರು ಕುಳಿತು ಚರ್ಚೆಮಾಡಿ ವಿರೋಧಪಕ್ಷದ ನಾಯಕರು ಕುಳಿತು ಚರ್ಚೆ ಮಾಡಿ ಇದೊಂದು ದೊಡ್ಡ ಕೆಲಸವನ್ನು ಮಾಡಿ. ಇದೊಂದು ಗಾಂಧಿಯನ್ ತತ್ವ. ದೇಶಕ್ಕೆ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತದೆ. ಜನಸಂಖ್ಯೆಯಲ್ಲಿ ಸ್ಟೆಬಿಲಿಟಿ ಆರೋಗ್ಯ ಕಾಪಾಡಬೇಕಾದರೆ ಇದನ್ನು ಜಾರಿಗೆ ತರಬೇಕೆಂದು ಕೇಳುತ್ತೇನೆ. 3ಲಕ್ಷ ಚಿಲ್ಲರೆ ಟಾಯ್ಲೆಟ್ಸ್‌ಗಳನ್ನು ಕಟ್ಟುವುದಕ್ಕೆ ಹಳ್ಳಿಗಳಲ್ಲಿ ಇವತ್ತು 65 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಟಾಯ್ಲೆಟ್ ವೇಸ್ಟ್ ಏನಾಗುತ್ತದೆ ಎಂದರೆ ಇಲ್ಲಿ ಪ್ರಶ್ನೆಗೆ ಅವರ ಉತ್ತರ ಏನೆಂದರೆ ಟ್ಯಾಂಕ್ ಕಟ್ಟಿ ಅದರಲ್ಲಿ ಹೋಗುತ್ತದೆ ಎಂದು ಹೇಳಿದ್ದಾರೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಹೋದಸಲವೇ ತಾವು ಬಹಳ ಅವಕಾಶವನ್ನು ಕೊಟ್ಟಿದ್ದೀರಿ. ಒಂದು ಮೊಳ ಭಾಷಣವನ್ನು ಮಾಡಿದ್ದಾರೆ. ಇವರ ಉತ್ತರ ಉತ್ತರ ನೋಡಿದರೆ ಮೂರು ಮೊಳ. ನಮಗೆ ಬಹಳ ತೊಂದರೆಯಾಗುತ್ತದೆ. ತಾವು ರಕ್ಷಣೆ ಕೊಡಬೇಕಂದು ಹೇಳಿ ತಮಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ರಾಜಣ್ಣ : ಬೆಳಿಗ್ಗೆಯಿಂದ ಮಾನ್ಯ ಸಚಿವರು ಉತ್ತರ ಕೊಡುವಾಗ ನಾನು ಮಧ್ಯೆ ಏನೂ ಕೇಳಲೇ ಇಲ್ಲ. ತಾವು ನನಗೆ ಸಮಯವನ್ನು ಮಾತನಾಡಲಿಕ್ಕೆ ಕೊಟ್ಟರಿ ಕೊನೆಯಲ್ಲಿ ಈ ಪ್ರಶ್ನೆಗೆ ಉತ್ತರ ಹೇಳಿ ಎಂದು ಕೇಳುತ್ತಿದ್ದೇನೆ. In our country, we are worshipping Gandhiji but we have forgotten the Gandhian Principles. ಒಂದೇ ಒಂದು ಗಾಂಧಿಯನ್ ಎಕಾನಮಿಯನ್ನು ಜಾರಿಗೆ ತನ್ನಿ. ಕೋಟ್ಯಾಂತರ ರೂಪಾಯಿಗಳ್ನು ಈ ದೇಶದಲ್ಲಿ ಉಳಿಸಬಹುದು.

ಶ್ರೀ ಸಿ. ಭೈರೇಗೌಡ : ಇದಕ್ಕೆ ನಿರ್ಮಲ ಕರ್ನಾಟಕ ಕಾರ್ಯಕ್ರಮ ಎನ್ನುತ್ತೇವೆ. ಹಳ್ಳಿಯಲ್ಲಿ ಇದನ್ನು ನಿರ್ಮಾಣ ಮಾಡುವ ಕಾರ್ಯ ನಡೆಯುತ್ತಿದೆ. ಮಲಮೂತ್ರಗಳನ್ನು ಶೇಖರಣೆ ಮಾಡಿ [illegible] ಕೂಡ ನಮ್ಮ ರಾಜ್ಯದಲಿ ನಡೆಯುತ್ತಿದೆ.

ಎಂದು ಹೇಳುತ್ತೇನೆ. ನಿರ್ಮಲ ಕರ್ನಾಟಕ ಯೋಜನೆಯಲ್ಲಿ ಕಕ್ಕಸ ಕಟ್ಟುವ ಯೋಜನೆ ಇಲ್ಲವೇ ನಿಮ್ಮ ತಾಲ್ಲೂಕಿನಲ್ಲಿ?

ಶ್ರೀ ಕಾಗೋಡು ತಿಮ್ಮಪ್ಪ : ತುಂಬಿದ ಮೇಲೆ ಅಲ್ಲೀ ಮಣ್ಣಾಗಿರುತ್ತದೆ.

ಶ್ರೀ ಸಿ. ಭೈರೇಗೌಡ : ಅದಕ್ಕೆ ಕಟ್ಟಡ ಎಲ್ಲಾ ಕಟ್ಟಿರುತ್ತಾರೆ. ಮಾನ್ಯ ತಿಮ್ಮಪ್ಪನವರೇ ಕಕ್ಕಸ್ ಗುಣಿಯಲ್ಲಿ ಇಳಿದು ನಾನು ಗೊಬ್ಬರವನ್ನು ಸಾಗಾಣಿಕೆ ಮಾಡಿ ಬಂದು ಇಲ್ಲಿ ನಿಂತಿದ್ದೇನೆ. ಅದಕ್ಕೆ ಸುತ್ತಲೂ ಕಲ್ಲುಕಟ್ಟಡವನ್ನು ಕಟ್ಟಿರುತ್ತಾರೆ. ನಮ್ಮ ಮನೆಯಲ್ಲಿರುವ ಕಕ್ಕಸ್ ಗುಂಡಿ ತುಂಬಿದ ಮೇಲೆ ಗಾಡಿ ತಂದು ಅದನ್ನು ತುಂಬಿ ತೆಗೆದುಕೊಂಡು ಹೋಗಿ ಹೊಲಕ್ಕೆ ಹಾಕಿ ಬಂದಿದ್ದೇನೆ. ಅದೇ ರೀತಿ ರೈತರೂ ಕೂಡ ಮಾಡುತ್ತಿದ್ದಾರೆ. ಇವತ್ತು ನಮ್ಮ ಸರ್ಕಾರ ಬಂದಮೇಲೆ ಬಹಳ ಮುಖ್ಯವಾಗಿ ರೈತರ ವಿಚಾರದಲ್ಲಿ ಬಹಳ ಮುಖ್ಯವಾದ ಕಾರ್ಯಕ್ರಮಗಳನ್ನು ಹಾಕಿದ್ದೇನೆ. ನಾನು ಆಗಲೇ ಹೇಳಿದ್ದೇನೆ. ಅನ್ನ ಕೊಡುವ ರೈತ, ಬಟ್ಟೆ ಕೊಡುವ ರೈತನಿಗೆ ಈ ಸಮಾಜ ಸರ್ಕಾರಗಳು ಯಾರೂ ಕೂಡ ಪುರಸ್ಕಾರ ನೀಡುವ ಕೆಲಸವನ್ನು ಮಾಡಿರಲಿಲ್ಲ. ನಾವು ಈ ಸರ್ಕಾರ ಬಂದಮೇಲೆ ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ರೈತರ ಬೆಳೆ ಸ್ಪರ್ಧೆಗಳನ್ನು ಏರ್ಪಾಡು ಮಾಡಿ ರಾಜ್ಯಮಟ್ಟದಲ್ಲಿ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುವ ಕಾರ್ಯಕ್ರಮವನ್ನು ಮಾಡಿದ್ದೇವೆ.

3.50 ಪಿ.ಎಂ.

ಮೂರು ಬಹುಮಾನಗಳನ್ನು ಕೊಡುತ್ತಿದ್ದೇವೆ. ಒಂದು ಲಕ್ಷ, 50 ಸಾವಿರ ಮತ್ತು 25 ಸಾವಿರ ಕೊಡುತ್ತಿದ್ದೇವೆ. ಜಿಲ್ಲಾ ಮಟ್ಟದಲ್ಲಿ 50 ಸಾವಿರ, 25 ಸಾವಿರ, ಹತ್ತು ಸಾವಿರ ಮತ್ತು ತಾಲ್ಲೂಕು ಮಟ್ಟದಲ್ಲಿ ಸಹ ಐದು ಸಾವಿರ ಹತ್ತು ಸಾವಿರ ರೂಪಾಯಿಗಳ ಪುರಸ್ಕಾರವನ್ನು ಕೊಡತಕ್ಕದ್ದು ಮತ್ತು ಅವರನ್ನು ಗುರುತಿಸಿದ್ದು ವಿಧಾನಸೌಧದ ಮೆಟ್ಟಿಲ ಮೇಲೆ ನಿಲ್ಲಿಸತಕ್ಕ, ಗೌರವಿಸತಕ್ಕ ಕೆಲಸವನ್ನು ಕೂಡ ಮಾಡಿದ್ದೇವೆ. ಅದರ ಜೊತೆಯಲ್ಲಿ ಇವತ್ತು ಕೃಷಿಯಲ್ಲಿ ಸಾಕಷ್ಟು ಬೆಳವಣಿಗೆ ಆಗುತ್ತಿದೆ. ದೇಶದಲ್ಲಿ ಸಾಕಷ್ಟು ಬೆಳವಣಿಗೆ ಆಗುತ್ತಿದೆ. ಮಾನ್ಯ ತಿಮ್ಮಪ್ಪನವರು ಹೇಳುತ್ತಿದ್ದರು, ನಮ್ಮ ರೈತರನ್ನು ಹೊರ ದೇಶಕ್ಕೆ ಕರೆದುಕೊಂಡು ಹೋಗಿ ಎಂದು ಹೇಳುತ್ತಿದ್ದರು. ಮೊದಲು ನಮ್ಮ ದೇಶವನ್ನು ರೈತರು ನೋಡಲಿ. ನಮ್ಮ ದೇಶದಲ್ಲಿ ಏನಾಗುತ್ತಿದೆ ಎಂಬುದನ್ನು ರೈತರು ನೋಡಲಿ. ಆ ಕೆಲಸವನ್ನು ನಾವು ಇವತ್ತಿನ ದಿವಸ ಪ್ರಾರಂಭ ಮಾಡಿದ್ದೇವೆ. ಕಳೆದ ವರ್ಷದಿಂದ ಕರ್ನಾಟಕದಲ್ಲಿರತಕ್ಕ ಒಂದು ಸಾವಿರ ರೈತರನ್ನು ಭಾರತ ದರ್ಶನ ಕಾರ್ಯಕ್ರಮಕ್ಕೆ ಕರೆದುಕೊಂಡು ಹೋಗಿ, ಕೃಷಿಯಲ್ಲಿ ಆಗಿರತಕ್ಕ ಪ್ರಗತಿ ದರ್ಶನವನ್ನು ಈ ರೈತರು ಮಾಡಿಕೊಳ್ಳುವ ಹಾಗೆ ಮಾಡಿದ್ದೇವೆ. ಇದನ್ನು ಈ ದೇಶದ ಯಾವ ರಾಜ್ಯದವರೂ ಮಾಡಿಲ್ಲ. ಇಂಥ ಪ್ರಪ್ರಥಮವಾಗಿರತಕ್ಕ ಕೆಲಸಗಳನ್ನು ಮಾಡಿದ್ದೇವೆ. ಮೊದಲನೇ ವರ್ಷ ಸ್ವಲ್ಪ ವ್ಯತ್ಯಾಸ ಆಗಿರಬಹುದು. ಯಾರಾದರೂ ರೈತರು ಭಾರತ ದರ್ಶನ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ತಯಾರಿದ್ದರೆ ಅವರನ್ನು ಕಳುಹಿಸೋಣ. ಇದು ಮೊದಲನೇ ವರ್ಷ ಆಗಿರುವುದರಿಂದ ಕೆಲವು ಕಡೆ ತೊಂದರೆಗಳು ಅನಾನುಕೂಲತೆಗಳು ಆಗಿರಬಹುದು. ಅದನ್ನು

ಸರಿಪಡಿಸುತ್ತೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಇಷ್ಟು ಹೊತ್ತು ಚರ್ಚೆ ನಡೆಸಿದ್ದೇವೆ, ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಹಣ ಸಾಕಾಗುವುದಿಲ್ಲ. ಆದ್ದರಿಂದ ಇವತ್ತು ಕೆಲವು ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಯಾವ ರೀತಿಯಾಗಿ ಶೇಕಡಾ 5ರಷ್ಟು ಅಡ್ಮಿಷನ್ ಪೇಮೆಂಟ್ ಸೀಟೆಂದು ವ್ಯವಸ್ಥೆ ಮಾಡಿದ್ದಾರೋ ಅದೇ ರೀತಿ ಎರಡೂ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಶೇಕಡಾ 5ರಷ್ಟು ಪೇಮೆಂಟ್ ಸೀಟನ್ನು ಕೂಡ, ಎನ್‌ಆರ್‌ಐ ಪೇಮೆಂಟ್ ಸೀಟು ಇರತಕ್ಕ ಪದ್ಧತಿಯನ್ನು ಕೂಡ ಜಾರಿಗೆ ತಂದಿದ್ದೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೈತರು ಎಲ್ಲಿ ದುಡ್ಡು ಕೊಟ್ಟು ಹೋಗುತ್ತಾರೆ? ಯಾರಾದರೂ ಇಂಡಸ್ಟ್ರೀಯಲಿಸ್ಟ್ ಮಗ ಸುಮ್ಮನೆ ಡಿಗ್ರಿ ಇರಲಿ ಎಂದು ಹೋಗಬೇಕು. ಪ್ರೋಸೆಸಿಂಗ್ ಇಂಡಸ್ಟ್ರೀ, ಫ್ರೂಟ್ ಇಂಡಸ್ಟ್ರೀ ಅಥವಾ ಹಾರ್ಟಿಕಲ್ಚರ್ ಇಂಡಸ್ಟ್ರೀ ಪ್ರಾರಂಭ ಮಾಡಿರುವಂತಹ ಕೈಗಾರಿಕೋದ್ಯಮಿ ಮಗ ಹೋಗಬೇಕು. ರೈತನ ಮಗ ಅಲ್ಲಿಗೆ ದುಡ್ಡು ಕೊಟ್ಟು ಹೋಗುವ ಸಾಧ್ಯತೆ ಇದೆಯಾ? ನೀವು ಏಕೆ ಮಾಡುವುದಕ್ಕೆ ಹೊರಟಿದ್ದೀರಿ? ಅಲ್ಲಿ ಕೆಟ್ಟಿದೆ ಎಂದರೆ ಇನ್ನೊಂದು ಕಡೆ ಕೆಡಿಸಲಿಕ್ಕೆ ಹೊರಟ್ಟಿದ್ದೀರಾ? ಎಲ್ಲರೂ ದಿನಾ ಮುಂಜಾನೆ ಎದ್ದು ಬಯ್ಯುತ್ತೀರಿ. ಪುನಃ ಅದನ್ನೇ ನೀವು ಜಾರಿಯಲ್ಲಿ ತರುತ್ತೇವೆ ಎಂದು ಹೇಳುತ್ತೀರಿ.

ಶ್ರೀ ಸಿ. ಭೈರೇಗೌಡ : ಇಷ್ಟನ್ನು ಹೇಳುತ್ತಾ ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ತಕ್ಷಣ ಆಹಾರದ ಕೊರತೆ ಎಷ್ಟು ಇತ್ತು ಎಂದು ಎಲ್ಲರಿಗೂ ಗೊತ್ತಿದೆ. ಅಂದರೆ ಆಗ ಶಿಫ್ಟ್ ಟು ಮೌತ್ ಎನ್ನತಕ್ಕ ಒಂದು ಘೋಷಣೆ ಈ ದೇಶದಲ್ಲಿ ಇತ್ತು. ಆದರೆ ಇವತ್ತು ಆ ಒಂದು ಚಿತ್ರ ಬದಲಾವಣೆ ಆಗಿ ಇಡೀ ದೇಶ ಆಹಾರದಲ್ಲಿ ಸ್ವಾವಲಂಬನೆಯನ್ನು ಸ್ಥಾಪಿಸಿರುವುದಕ್ಕೆ ಈ ದೇಶದಲ್ಲಿರತಕ್ಕ ರೈತರು ಕಾರಣ. ಈ ದೇಶದಲ್ಲಿ ಏನಾದರೂ ಪ್ರಜಾಪ್ರಭುತ್ವ 50 ವರ್ಷಗಳಿಂದ ಅಭಾದಿತವಾಗಿ ನಡೆದುಕೊಂಡು ಬಂದಿದೆಯೆಂದರೆ ಯಾರೂ ಕಾರಣ ಅಲ್ಲ, ಈ ದೇಶದಲ್ಲಿ ಅದಕ್ಕೆ ರೈತ ಕಾರಣ. ಹಸಿವು ಯಾವುದನ್ನೂ ಕೂಡ ತಡೆಯುವುದಕ್ಕೆ ಸಾಧ್ಯ ಇಲ್ಲ. ಎಲ್ಲವನ್ನೂ ಕೂಡ ಮೀರಿಸಿರತಕ್ಕದ್ದು ಏನಾದರೂ ಇದೆ ಎಂದರೆ ಅದು ಹಸಿವು. ಆ ಹಸಿವನ್ನು ನಿವಾರಣೆ ಮಾಡತಕ್ಕಂತಹ ಕೆಲಸ ಈ ದೇಶದಲ್ಲಿ ಆಗಿರುವ ಕಾರಣದಿಂದ, ಈ ದೇಶದಲ್ಲಿ 50 ವರ್ಷದಿಂದ ಪ್ರಜಾಪ್ರಭುತ್ವ ಅಭಾದಿತವಾಗಿ ನಡೆದುಕೊಂಡು ಬಂದಿದೆ. ಅದಕ್ಕೆ ಯಾರಾದರೂ ಕಾರಣ ಇದ್ದರೆ ರೈತ ಮತ್ತು ರೈತರ ನೆರವಿಗೆ ಬಂದಿರತಕ್ಕ ಕೃಷಿ ವಿಜ್ಞಾನಿಗಳು ಎನ್ನತಕ್ಕದ್ದನ್ನು ಈ ಸಂದರ್ಭದಲ್ಲಿ ಜ್ಞಾಪಿಸುತ್ತೇನೆ. ಇವತ್ತು ನಮ್ಮ ಬಹಳಷ್ಟು ಸ್ನೇಹಿತರು ಮಾತನಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಹಾಗೂ ಇತರ ಹಳೆಯ ಸ್ನೇಹಿತರು ಮಾತನಾಡಿದ್ಧಾರೆ. ನಾನು ಇಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಲೇ ಬೇಕಾಗಿದೆ. ಕೇಂದ್ರದಲ್ಲಿ ಸರ್ಕಾರ ರಚನೆ ಆಗಿ ಎರಡು ತಿಂಗಳ ಮೇಲೆ ಆಯಿತು. ಇಲ್ಲಿಯವರೆಗೂ ಕೂಡ ಕೃಷಿ ಸಚಿವರನ್ನು ನೇಮಕ ಮಾಡುವುದಕ್ಕೆ ಆಗಿಲ್ಲ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಮಾನ್ಯ ಬಾಬಾಗೌಡರು ಇದ್ದಾರಲ್ಲಾ, ನೀವೇನು ಈ ರೀತಿ ಹೇಳುತಿದೀರಿ?

ಶ್ರೀ ಸಿ. ಬೈರೇಗೌಡ : ಒಬ್ಬ ರಾಜ್ಯ ಸಚಿವರು ಇದ್ದಾರೆ. ಅವರಿಗೆ ಇಂಡಿಪೆಂಡೆಂಟ್ ಛಾರ್ಜ್ ಇಲ್ಲ. ಕೃಷಿಯನ್ನು ಸ್ವತಂತ್ರವಾಗಿ ನಿರ್ವಹಣೆ ಮಾಡಲಿಕ್ಕೆ ಅವರಿಗೆ ಛಾರ್ಜ್ ಇಲ್ಲ. ಅವರೂ ಪ್ರಧಾನ ಮಂತ್ರಿಗಳಿಗೆ ಆಟ್ಯಾಚ್ ಆಗಿರತಕ್ಕವರು. ಪ್ರಧಾನ ಮಂತ್ರಿಗಳ ಅಧೀನದಲ್ಲಿ ಇರತಕ್ಕವರು. ಈ ದೇಶದ ದೌರ್ಭಾಗ್ಯ ಏನು ಎಂದರೆ ಇದುವರೆಗೂ ಸಹ ಹೊಸ ಕೃಷಿ ಸಚಿವರನ್ನು ಸಚಿವ ಸಂಪುಟದ ದರ್ಜೆಗೆ ನೇಮಕ ಮಾಡಲು ಆಗಿಲ್ಲ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ನಿಮ್ಮ ಸಂಪುಟ ಸರಿಯಾಗಿದೆಯೇ ನೋಡಿಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈ ದೇಶದ ದೌರ್ಭಾಗ್ಯವನ್ನು ನಾನು ಹೇಳಲೇಬೇಕು.

(ಗೊಂದಲ)

ಶ್ರೀ ಎಚ್.ಡಿ. ಬಸವರಾಜ್ : ಈಗ ಮೂರು ವರ್ಷಗಳಿಂದ ಭರ್ತಿ ಆಗಿದೆಯೇ? ಕೃಷಿ ಸಚಿವರು ಈ ತರಹ ಮಾತಾಡುವುದು ಸರಿಯಲ್ಲ ನೀವೇನು ಸುಧಾರಣೆ ಮಾಡಿದ್ದೀರಿ ಅದನ್ನು ಹೇಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಸ್ವತಂತ್ರ ನಿರ್ವಹಣೆ ಇಲ್ಲ.

(ಗೊಂದಲ)

ಶ್ರೀ ಎಚ್.ಡಿ. ಬಸವರಾಜ್ : ನಿಮ್ಮ ಸುಧಾರಣೆ ಬಗ್ಗೆ, ಮಲೆನಾಡಿನ ಜನರಿಗೆ ನಿಮ್ಮ ಕೆಲಸದಿಂದ ಏನು ಅನುಕೂಲ ಆಗಿದೆ, ಅದರ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಕೇಂದ್ರ ಸರ್ಕಾರದಲ್ಲಿ ಒಬ್ಬ ಸಚಿವ ಸಂಪುಟದ ಮಂತ್ರಿಯನ್ನು ಮಾಡುವುದಕ್ಕೆ ಆಗಲಿಲ್ಲ ಎಂದರೆ ಇವರು ಈ ದೇಶದ ರೈತರ ಹಿತವನ್ನು ಯಾವ ರೀತಿ ಕಾಪಾಡುತ್ತಾರೆ? ಏನಾಗಬೇಕು ಎನ್ನತಕ್ಕದ್ದರ ಬಗ್ಗೆ ರೈತರು ಚಿಂತನೆ ಮಾಡಬೇಕಾಗಿರತಕ್ಕ ಸಮಯ ಇವತ್ತು ಬಂದಿದೆ. ಈ ಮಾತನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಈ ದೇಶದ ರೈತರ ಹಿತವನ್ನು ಕಾಪಾಡುವುದಕ್ಕೆ ಒಬ್ಬ ಸಚಿವ ಸಂಪುಟದ ದರ್ಜೆಯ ಮಂತ್ರಿ ಕೇಂದ್ರಸರ್ಕಾರಬಲ್ಲಿಲ್ಲ ಎಂದರೆ ಯಾವುದಕ್ಕೆ ಬೆಂಬಲ ಕೊಡುತ್ತಿದ್ದೀರಿ?

(ಗೊಂದಲ)

ಶ್ರೀ ಎಚ್.ಡಿ. ಬಸವರಾಜ್ : ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಲು ಹೋಗಬೇಡಿ. ನಿಮ್ಮ ಸಾಧನೆಗಳ ಬಗ್ಗೆ ಮಾತ್ರ ಮಾತನಾಡಿ. ರೈತರಿಗೆ ಎಷ್ಟು ಅನುಕೂಲ ಮಾಡಿದ್ದೀರಿ? ರೈತರಿಗೆ ಎಷ್ಟು ಸಬ್ಸಿಡಿ ಕೊಟ್ಟಿದ್ದೀರಿ ಹೇಳಿ. ಮಣ್ಣಿನ ಮಗ ಪ್ರಧಾನ ಮಂತ್ರಿ ಆಗಿದ್ದಾಗ ರೈತರ ಹಿತಗಳನ್ನು ಸಾಧನೆ ಮಾಡಿದ್ದಾರಲ್ಲಾ, ಅದರ ಪಟ್ಟಿ ಕೊಡಿ. ನಾವೂ ಹೇಳುತ್ತೇವೆ.

ಶ್ರೀ ಸಿ. ಬೈರೇಗೌಡ : ಈ ದೇಶದಲ್ಲಿ ಇವತ್ತು ಯಾವುದಕ್ಕೆ ಪ್ರಾಶಸ್ತ್ಯ ದೊರೆಯುತ್ತಿದೆ? ಅವರೇ ನಮ್ಮ ಮಾನ್ಯ ಸ್ನೇಹಿತರುಗಳು ಹೇಳುತ್ತಿದ್ದಾರೆ, ರೈತರು ಇವತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಇದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ದೇಶದ ಅನೇಕ ಭಾಗಗಳಲ್ಲಿ ಈ ಪರಿಸ್ಥಿತಿ ಉಂಟಾಗಿದೆ. ಪಂಜಾಬ್‌ನಲ್ಲಿ, ಆಂಧ್ರದಲ್ಲಿ ಮಹಾರಾಷ್ಟ್ರದಲ್ಲಿ ಹಾಗೂ ಕರ್ನಾಟಕದಲ್ಲಿ ಸಹ ಈ ಪರಿಸ್ಥಿತಿ ಉಂಟಾಗಿದೆ. ಆದರೆ ಇವತ್ತು ಪ್ರಾಶಸ್ತ್ಯ ಯಾವುದಕ್ಕೆ ಸಿಗುತ್ತಿದೆ? ಬಾಂಬನ್ನು ಸಿಡಿಸುವುದಕ್ಕೆ ಸಿಗುತ್ತಿದೆ. ಹಸಿವಿನಿಂದ ಸಾಯುತ್ತಿದ್ದಾರೆ, ಅದರ ಬಗೆ ಚಿಂತನೆ ಆಗಬೇಕು ಎಂದರೆ..

ಶ್ರೀ ಎಚ್.ಡಿ. ಬಸವರಾಜ್ : ಇವತ್ತು ನಿಮ್ಮ ಆಳ್ವಿಕೆಯಿಂದಾಗಿ ದೇಶದ ಉದ್ದಗಲಕ್ಕೂ ಈ ರಾಜ್ಯದಲ್ಲಿ ಒಬ್ಬೊಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣ ಮಾಡಿದ್ದೀರಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈ ದೇಶಕ್ಕೆ ಅನ್ನ ಕೊಡತಕ್ಕ ರೈತನಿಗೆ ಪ್ರಾಶಸ್ತ್ಯ ಸಿಗಬೇಕಿತ್ತು. ಅದು ಸಿಗುತ್ತಿಲ್ಲ ಎಂದು ದುಃಖದ ಸಂಗತಿಯನ್ನು ಹೇಳಿ ಇವತ್ತಿನ ದಿವಸ ತಾವು ನನಗೆ ಹೆಚ್ಚಿನ ವೇಳೆಯನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಬೇಡಿಕೆಗಳಿಗೆ ಮಂಜೂರಾತಿಯನ್ನು ಈ ಮಹಾ ಸದನ ನೀಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಸಿ. ಬೈರೇಗೌಡರು ಈಗಾಗಲೇ ಬಹಳ ದೀರ್ಘವಾಗಿ ಐದು ಘಂಟೆಗಳ ಕಾಲ ಉತ್ತರವನ್ನು ಕೊಟ್ಟಿದ್ದಾರೆ. ಮೂರೂವರೆ ಮತ್ತು ಈಗ ಒಂದು ತಾಸು, ನಾಲ್ಕೂವರೆ ತಾಸು ಮಾತನಾಡಿದ್ದಾರೆ. ಅವರಿಗೆ ಹಿಂದೆ ವಿಷಯ ಸಮಿತಿ ಇದ್ದ ಕಾರಣ ಚರ್ಚೆ ಆಗಿಲ್ಲ ಮತ್ತು ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಸಿಗಲಿಲ್ಲ. ಆದರೆ ಈ ಸಲ ಸುಮಾರು 4-5 ದಿವಸ ಚರ್ಚೆ ಆದ ಮೇಲೆ ಸಂಪೂರ್ಣವಾಗಿ ಅವರೂ ಸಹ ಉತ್ತರ ಕೊಡುವುದಕ್ಕೆ ಒಂದು ದಿವಸ ತೆಗೆದುಕೊಂಡಿದ್ದಾರೆ. ಅದನ್ನು ಬಡ್ಡಿ ಸಮೇತ ವಸೂಲಿ ಮಾಡಿಕೊಂಡಿದ್ದಾರೆ. ಆದರೆ ನಾನು ನೋಡಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಇಟ್ಟಿದ್ದರು? ಯಾವ ರೀತಿಯಾಗಿ ಮೇಜರ್ ಇಂಡಸ್ಟ್ರೀಸ್‌ಗೆ ಒತ್ತು ಕೊಟ್ಟು ಅಗ್ರಿಕಲ್ಚರಲ್ ಸೆಕ್ಟಾರ್ಸ್‌ಗೆ ಅದರ ಕುತ್ತಿಗೆಯನ್ನು ಹಿಸುಕಿದರು ಎಂದು ಹೇಳಿ ಏನು ಭಾಷಣ ಪ್ರಾರಂಭ ಮಾಡಿದರೋ ನಾನು ಅದನ್ನು ಇಲ್ಲಿಯವರೆಗೆ ಕೇಳಿಸಿಕೊಂಡು ಬಂದೆ. ಎಲ್ಲ ಅಮೆರಿಕಾ, ಜಪಾನ್, ಕೆನಡಾ, ಜರ್ಮನಿ ಅಡ್ಡಾಡಿ ಸುರಪುರಕ್ಕೆ ಹೋಗಿ, ಕೋಲಾರಕ್ಕೆ ಬಂದು ಮತ್ತೆ ಇಲ್ಲಿಯವರೆಗೆ ಬಂದರು. ಬಂದ ಮೇಲೆ ನಾನು ನೋಡಿದೆ. ಇವರ ಬಜೆಟ್‌ನಲ್ಲಿ ಏನಾದರೂ ವಿಶೇಷವಾದ ಹಣ ಅಥವಾ

ಏರಿಕೆ ಇದೆಯಾ ಎಂದು ನಾನು ನೋಡಿದೆ. ನಾನು ಆ ಪುಸ್ತಕ ತರಿಸಿದೆ. ಡೀಟೈಲ್ಸ್ ಆಫ್ ಪ್ರಾವಿಷನ್ಸ್ ಫಾರ್ ಪ್ಲಾನ್ ಸ್ಕೀಮ್‌ನಲ್ಲಿ ಇವರ ಸಾಧನೆ ಏನು? ಎಷ್ಟು ಹಣ ಕೊಟ್ಟಿದ್ದಾರೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ಪುಸ್ತಕ ತಮ್ಮಲ್ಲಿದ್ದರೆ ನೋಡಿಕೊಳ್ಳಿ. ಕ್ರಾಪ್‌ಹಸ್ಬೆಂಡರಿ, ಸಾಯಿಲ್ ಅಂಡ್ ವಾಟರ್ ಕನ್‌ಸರ್‌ವೇಷನ್ ಡೈರಿ ಡೆವಲಪ್‌ಮೆಂಟ್, ಅಗ್ರಿಕಲ್ಚರ್ ರೀಸರ್ಚ್ ಅಂಡ್ ಎಜುಕೇಷನ್ ಇನ್‌ವೆಸ್ಟ್‌ಮೆಂಟ್ ಇನ್ ಅಗ್ರಿಕಲ್ಚರ್, ಅದರ್ ಅಗ್ರಿಕಲ್ಚರಲ್ ಪ್ರೋಗ್ರಾಂಗಳ ಹೆಡ್ಡಿಂಗ್ ಅನ್ನು ತಾವು ನೋಡಿದರೆ 1996-97ರಲ್ಲಿ 41 ಕೋಟಿ ರೂಪಾಯಿಗಳಿದ್ದರೆ, 97-98ರಲ್ಲಿ ಖರ್ಚು ಮಾಡಿದ್ದು 34 ಕೋಟಿ ರೂಪಾಯಿಗಳು. ಬೇಕಾದರೆ ತಾವು ಬರೆದುಕೊಳ್ಳಿ. 96-97ರಲ್ಲಿ ಸಾಯಿಲ್ ಕನ್‌ಸರ್‌ವೇಷನ್‌ನಲ್ಲಿ 22 ಕೋಟಿ ರೂಪಾಯಿಗಳಿದ್ದರೆ ಖರ್ಚು ಮಾಡಿದ್ದು 19 ಕೋಟಿ ರೂಪಾಯಿಗಳು. ಅನಂತರ, ಇದೇ ರೀತಿಯಾಗಿ ಇನ್‌ವೆಸ್ಟ್‌ಮೆಂಟ್ ಇನ್ ಅಗ್ರಿಕಲ್ಚರ್‌ನಲ್ಲಿ 21 ಕೋಟಿ ರೂಪಾಯಿಗಳು ಇಟ್ಟಿದ್ದರೆ ಖರ್ಚು ಮಾಡಿದ್ದು 6 ಕೋಟಿ ರೂಪಾಯಿಗಳು. ಇದೆಲ್ಲವನ್ನೂ ನೋಡಿದರೆ ಪ್ಲಾನ್ ಸ್ಕೀಮ್‌ನಲ್ಲಿ ನೀವು ಹಣವನ್ನು ಕಡಿಮೆ ಮಾಡುತ್ತಾ ಬಂದಿದ್ದೀರೇ ಹೊರತು ಹೆಚ್ಚು ಮಾಡಿಲ್ಲ. ಸ್ಟೇಟ್ ಸೆಕ್ಟಾರ್‌ನಲ್ಲಿ ನೀವು ಅಲೋಕೇಷನ್ ಕೊಟ್ಟಿದ್ದು, ಮತ್ತು ಸೆಂಟ್ರಲ್ ಸೆಕ್ಟಾರ್‌ನಲ್ಲಿ ಶೇಕಡಾ ಎರಡರಷ್ಟು ಹೆಚ್ಚು ಕೊಟ್ಟಿದ್ದನ್ನು ಬಿಟ್ಟರೆ ಹೆಚ್ಚು ಹಣ ಇದರಲ್ಲಿ ಬಂದಿಲ್ಲ. ನಾನು ಕೇಳುತ್ತೇನೆ : ತಾವು ಸ್ಟೇಟ್ ಸೆಕ್ಟಾರ್‌ನಲ್ಲಿ ಅಲೋಕೇಷನ್ ಅನ್ನು ಜಾಸ್ತಿ ಮಾಡಬಹುದಾಗಿತ್ತಲ್ಲವೆ? ಏಕೆ ಮಾಡಲಿಲ್ಲ? ಕಳೆದ ಹತ್ತು ವರ್ಷಗಳಿಗೆ ಹೋಲಿಕೆ ಮಾಡಿದರೆ ಅಲೋಕೇಷನ್ ಕಡಿಮೆಯಾಗುತ್ತಾ ಬಂದಿದೆ. ಅಲ್ಲದೆ, ಮಾನ್ಯ ಅರ್ಥ ಸಚಿವರು ಎಲ್ಲಾ ಸೆಕ್ಟಾರ್‌ಗಳಿಗೆ ಜನರಲ್ ಬಜೆಟ್‌ನಲ್ಲಿ ಏನು ಅಲೋಕೇಷನ್ ಮಾಡಿದ್ದಾರೆ, ಪವರ್ ಮತ್ತು ಇರಿಗೇಷನ್ ಹೊರತು ಪಡಿಸಿದರೆ ಅಗ್ರಿಕಲ್ಚರ್ ಸೆಕ್ಟಾರ್‌ಗೂ ಕೂಡ ಕಡಿಮೆಯಾಗಿದೆ. ಬೇಕಾದರೆ ನೀವು ನಿಮ್ಮ ಪುಸ್ತಕವನ್ನು ತೆಗೆದು ನೋಡಿ. ಇವೊತ್ತು ತಾವೇ ಹಣವನ್ನು ಇಷ್ಟೊಂದು ಕಡಿಮೆ ಮಾಡುವಾಗ ನಾನು ಬಂದ ನಂತರ ಇಷ್ಟವಾಯಿತು, ಅಷ್ಟಾಯಿತೆಂದು ಸುಮ್ಮನೆ ಹೇಳುತ್ತಿದ್ದೀರಲ್ಲಾ, ಇದು ಸತ್ಯಕ್ಕೆ ದೂರವಾದ ಮಾತು. ಎರಡನೆಯದಾಗಿ, ತಾವು ಐದು ಗಂಟೆಗಳಷ್ಟು ಕಾಲ ದೀರ್ಘವಾಗಿ ಭಾಷಣ ಮಾಡಿದ ನಂತರ, ರಾಜ್ಯದಲ್ಲಿ ರೈತರುಗಳು ತಾವು ಬೆಳೆದಂಥ ಬೆಳೆಗಳನ್ನು ಕಳೆದುಕೊಂಡು ಕೆಲವರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಏನಾದರೂ ಹಣ ಬಿಡುಗಡೆ ಮಾಡುವುದಾಗಲೀ ಅಥವಾ ಪರಿಹಾರದ ಹಣವನ್ನು ಹೆಚ್ಚು ಮಾಡುವ ಬಗ್ಗೆ ಪ್ರಕಟಿಸಿ, ಬೆಳೆಗಳು ನಾಶವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪರಿಶೀಲಿಸಲು ರಚಿಸಲಾಗಿದ್ದ ಜಂಟಿ ಸದನ ಸಮಿತಿಯು ಕೊಟ್ಟಂಥ ವರದಿಯನ್ನು ನಾನು ಅನುಷ್ಠಾನಗೊಳಿಸುತ್ತೇನೆ, ನಾನು ರೈತನ ಮಗ, ರೈತರಿಗಾಗಿ ಅನೇಕ ಕೆಲಸಗಳನ್ನು ಮಾಡಿದ್ದೇನೆಂದು ಅವರು ಇಲ್ಲಿ ಬೆನ್ನು ಚಪ್ಪರಿಸಿಕೊಂಡು ಮಾತನಾಡಿದರು ಅದಕ್ಕೆ ನಾನೇನು ತಿಳಿದುಕೊಂಡೆನೆಂದರೆ, ಕನಿಷ್ಠ ಪಕ್ಷ ರೈತರ ಬಗ್ಗೆ ಕಳಕಳಿ ಇರುವ ಮಂತ್ರಿಗಳು ತಮ್ಮ ಭಾಷಣದಲ್ಲಿ ಸಂಯುಕ್ತ ರಂಗ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದನಂತರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆಯೆಂಬ ಮಾತನ್ನು ಹೇಳಿದರಲ್ಲದೆ ಬೆಳೆ ವಿಮಾ ಯೋಜನೆಯನ್ನು ಪ್ರಾಯೋಗಿಕವಾಗಿ ಬಿಜಾಪುರ ಜಿಲೆಯಲಿ ತಂದಿದೇವೆಂದು ಇದನು ಕೇಂದ ಸರ್ಕಾರ ಒಪಿಕೊಂಡಿದು.

ನಂತರ ರಾಜ್ಯಾದ್ಯಂತ ವಿಸ್ತರಿಸಬೇಕೆಂಬ ಉದ್ದೇಶ ವಿದೆಯೆಂಬ ಮಾತನ್ನೂ ಸಹ ಹೇಳಿದರು. ಆದರೆ, ಇದಕ್ಕೆ ಕಾಸು, ಕರಿಮಣಿ ಇಲ್ಲ, ಸುಮ್ಮನೆ ರೆಕಮೆಂಡ್ ಮಾಡುತ್ತೇವೆಂದು ಹೇಳಿದ್ದು ಬಿಟ್ಟರೆ ಬೇರೇನೂ ಪ್ರಯೋಜನ ರೈತರಿಗೆ ಆಗಿಲ್ಲ. ಪರಿಹಾರ ಕೊಡುವ ಬಗ್ಗೆಯಾಗಲಿ, ಜಂಟಿ ಸದನ ಸಮಿತಿ ಕೊಟ್ಟಂಥ ವರದಿಯನ್ನು ಅಂಗೀಕರಿಸುವುದಾಗಲೀ ಅಥವಾ ಪ್ಲಾನ್ ಸ್ಕೀಮ್‌ನಲ್ಲಿ ಹೆಚ್ಚು ಹಣವನ್ನು ಸಂಗ್ರಹಿಸುವುದಾಗಲೀ ಇದ್ಯಾವುದರ ಬಗ್ಗೆಯೂ ಉತ್ತರ ತೃಪ್ತಿಕರವಾಗಿಲ್ಲ. ಅದಕ್ಕೋಸ್ಕರ ಈ ಸಂದರ್ಭದಲ್ಲಿ ಇವರ ಉತ್ತರವನ್ನು ನಿಜವಾಗಿಯೂ ಖಂಡಿಸಬೇಕಾಗುತ್ತದೆ. ಅವರು ಕೃಷಿ ಬಗ್ಗೆ ಇತಿಹಾಸ ಹೇಳಿದರು, ಅದಕ್ಕೆ ಮುಖ್ಯಮಂತ್ರಿಗಳು ಪ್ರೋತ್ಸಾಹ ಕೊಟ್ಟರು. ಅಂದರೆ ಆಹಾರ ಉತ್ಪಾದನೆ ಹೇಗಾಗುತ್ತದೆ, ಅದರ ರುಚಿ ಮನುಷ್ಯನಿಗೆ ಹೇಗಾಯಿತು, ಅದರ ಇತಿಹಾಸ ಎಲ್ಲಿಂದ ಸೃಷ್ಟಿಯಾಯಿತೆಂಬ ವಿವರ ಹೇಳಿದರು. ಅದರ ಇತಿಹಾಸ ಹೇಳಿದರೆ ಹೊರತು ಪ್ರಾಕ್ಟಿಕಲ್ ಆಗಿ ಏನು ಮಾಡಬೇಕು, ಹಣವನ್ನು ಕ್ರೋಢಿಕರಿಸುವುದರ ಬಗ್ಗೆಯಾಗಲೀ, ರೀಸರ್ಚ್ ಅಥವಾ ಅಗ್ರಿಕಲ್ಚರ್ ಯೂನಿವರ್ಸಿಟಿ ಬಗ್ಗೆಯಾಗಲೀ ತೃಪ್ತಿಕರವಾದ ಉತ್ತರ ಹೇಳಲಿಲ. ನಿಜವಾಗಿಯೂ ಈ ಸರ್ಕಾರಕ್ಕೆ ರೈತರ ಬಗ್ಗೆಯಾಗಲೀ ತೃಪ್ತಿಕರವಾದ ಉತ್ತರ ಹೇಳಲಿಲ್ಲ. ನಿಜವಾಗಿಯೂ ಈ ಸರ್ಕಾರಕ್ಕೆ ರೈತರ ಬಗ್ಗೆ ಆಸಕ್ತಿಯಿಲ್ಲ, ಇವರ ಆಸಕ್ತಿ, ಕಳಕಳಿ ಬರೀ ಭಾಷಣದಲ್ಲಿ ಮಾತ್ರ ಇದೆಯೆಂಬ ಮಾತನ್ನು ಹೇಳಬೇಕಾಗುತ್ತದೆ. ನಾವು ಇವರ ಉತ್ತರ ವಿರೋಧಿಸಿ ವಾಕ್‌ಔಟ್ ಮಾಡುವುದಿಲ್ಲ, ವಾಕ್‌ಔಟ್ ಮಾಡಿದರೆ, ಧರಣಿ ಮಾಡಿದರೆ ಅವರ ಹೃದಯಕ್ಕೆ ಮುಟ್ಟುವುದಿಲ್ಲ, ಅಂದ ಮೇಲೆ ಏನು ಮಾಡುವುದಕ್ಕಾಗುತ್ತದೆ? ಇಂತಹ ಪಾಷಾಣ ಹೃದಯದ ಸರ್ಕಾರಕ್ಕೆ ಜನರೇ ತಕ್ಕ ಪಾಠ ಕಲಿಸುತ್ತಾರೆ, ಪಾಠ ಕಲಿಸುವಾಗ ನಾವು ಅವರಿಗೆ ಪದೇ ಪದೇ ಛೀಮಾರಿ ಹಾಕುವುದು ಸರಿಯಲ್ಲವೆಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತಾ, ಅವರ ಉತ್ತರದಿಂದ ರೈತರಿಗೆ ತಪ್ತಿಯಾಗಿಲ್ಲವೆಂಬ ಮಾತುಗಳನ್ನು ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಕೃಷಿ ಸಚಿವರಾದ ಬೈರೇಗೌಡರು ತಮಗಿರುವ ಅನುಭವವನ್ನು ಇವೊತ್ತು ಭಾಷಣದ ರೂಪದಲ್ಲಿ ಇಡೀ ರಾಜ್ಯದ ಜನತೆಗೆ ತೋರಿಸಿದ್ದಾರೆ. ಕೊನೆಗೆ ಉಪ ಚುನಾವಣೆಗೆ ಎಂಬಂತೆ ಭಾಷಣ ಕೂಡ ಆರಂಭಿಸಿದರು. ಆದರೆ, ಒಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇಡೀ ರಾಜ್ಯಾದ್ಯಂತ ಕಳಪೆ ಬೀಜ ಹಾಗೂ ಕ್ರಿಮಿನಾಶಕಗಳ ಬಗ್ಗೆ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಹಾಗೂ ಸದನದಲ್ಲಿ ಚರ್ಚೆಯಾದ ಬಳಿಕ, ಕಳಪೆ ಬೀಜ ಹಾಗೂ ಕ್ರಿಮಿನಾಶಕಗಳನ್ನು ವಿತರಿಸುವ ಕಂಪನಿಗಳು ಯಾವುವು ಇವೆಯೋ ಅವರ ಮೇಲೆ ಕ್ರಮ ತೆಗೆದುಕೊಂಡು ಆ ಕುರಿತು ಕಾನೂನು ತರುವವರಿದ್ದೀರೆಂದು ಅಂದು ಕೊಂಡಿದ್ದೆ, ಅಲ್ಲದೆ, ಈ ವಿಷಯವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ ಇಡೀ ರಾಜ್ಯದ ಜನತೆಯ ಶಹಭಾಷ್‌ಗಿರಿ ಪಡೆಯುತ್ತೀರೆಂದು ತಿಳಿದುಕೊಂಡಿದ್ದೆವು. ಈಗಲಾದರೂ ತಮ್ಮ ಉತ್ತರದಲ್ಲಿ ಅದರ ಪ್ರಸ್ತಾಪವಾಗಲಿಲ್ಲ. ಕಳಪೆ ಬೀಜ ಹಾಗೂ ಕ್ರಿಮಿನಾಶಕಗಳನ್ನು ವಿತರಿಸುವ ಕಂಪನಿಗಳ ವಿರುದ್ಧ ಉಗ್ರ ಕ್ರಮ ತೆಗೆದುಕೊಳ್ಳುವ ಬಗ್ಗೆ ತಿಳಿಸಿದಾಗ ಕಳೆದ ಬಾರಿ ತಾವು ಮಾತನಾಡುವಾಗ ಅಂತಹ ವ್ಯಕ್ತಿಗಳು ಕೋರ್ಟಿನಲ್ಲಿ ರೂ.200, 300ಗಳಂತೆ ಫೆನಾಲ್ಟಿ ಕಟ್ಟಿ ಬರುತ್ತಾರಾದ್ದರಿಂದ ನಾವೇನು

ಮಾಡುವುದಕ್ಕಾಗುತ್ತದೆಂದು ಹೇಳಿದಿರಿ. ಅದರ ಬಗ್ಗೆ ಒತ್ತಿ ಹೇಳಿದಾಗಲೂ ಅದಕ್ಕೆ ಸರಿಯಾದ ಉತ್ತರ ಕೊಡಲಿಲ್ಲ. ಕಳಪೆ ಬೀಜ ಹಾಗೂ ಕ್ರಿಮಿನಾಶಕಗಳನ್ನು ವಿತರಿಸುವ ಸಂಬಂಧಪಟ್ಟ ಕಂಪನಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೊರಗಡೆ ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿರಿ. ಹಾಗಾಗಿ ಸಂಬಂಧಪಟ್ಟ ಕಂಪನಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಏನಾದರೂ ಕಾನೂನು ತರುವಂಥ ಪ್ರಯತ್ನ ಮಾಡುತ್ತೀರೆಂದು ನಾನು ತಿಳಿದಿದ್ದೆ. ಆದುದರಿಂದ, ಈ ಸಂದರ್ಭದಲ್ಲಾದರೂ ಕೂಡ ತಮ್ಮ ಉತ್ತರದಲ್ಲಿ ಇದರ ಬಗ್ಗೆ ಸ್ಪಷ್ಟಪಡಿಸಬೇಕೆಂದು ಹೇಳಬಯಸುತ್ತೇನೆ. ಜೊತೆಗೆ ಈಗಾಗಲೇ ಬೀದರ್ ಮತ್ತು ಗುಲ್ಬರ್ಗಾ ಜಿಲೆಗಳಲ್ಲಿ ಲೋಕಸಭಾ ಸದಸ್ಯರಾಗಿರುವ ರಾಮಚಂದ್ರಪ್ಪ ವೀರಪ್ಪನವರ ನೇತೃತ್ವದಲ್ಲಿ ನಡೆಯುತ್ತಿರುವ ಚಳವಳಿ ಉಗ್ರ ಸ್ವರೂಪ ತಾಳುವಂಥ ಪರಿಸ್ಥಿತಿಯಿರುವುದರಿಂದ ಅದನ್ನು ಶಮನಗೊಳಿಸುವ ದೃಷ್ಟಿಯಿಂದಲಾದರೂ ಹೊಸ ನೀತಿ ಘೋಷಣೆ ಮಾಡಿ ಬೆಳೆ ನಷ್ಟದಿಂದ ಕಂಗಾಲಾಗಿರುವ ರೈತರಿಗೆ ಅನುಕೂಲ ಮಾಡಿಕೊಡುವ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆನುವುದರ ಬಗ್ಗೆ ತಿಳಿಸಬೇಕೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಕಳೆದ ಮೂರೂವರೆ ವರ್ಷಗಳಲ್ಲಿ ಇಷ್ಟೊಂದು ದೀರ್ಘವಾಗಿ ಭಾಷಣ ಮಾಡಿದ ಯಾರನ್ನೂ ನಾನು ನೋಡಿರಲಿಲ್ಲ. ಬೆಳಿಗ್ಗೆ 10.15 ಗಂಟೆಗೆ ತಮ್ಮ ಭಾಷಣ ಶುರು ಮಾಡಿದವರು ಈಗ ಮುಗಿಸಿದ್ದಾರೆ, ಅವರು ಇನ್ನಷ್ಟು ದೀರ್ಘವಾಗಿ ಭಾಷಣ ಮಾಡುವಷ್ಟು ವಿಚಾರಗಳಿವೆ. ಕಳೆದ ಮೂರುವರೆ ವರ್ಷಗಳಿಂದ ಈ ವಿಚಾರಗಳ ಬಗ್ಗೆ ಮಾತನಾಡಿಲ್ಲದಿರುವುದರಿಂದ ಈಗ ಅವಕಾಶ ಸಿಕ್ಕಿದ್ದು ಅದರ ಬಗ್ಗೆ ಹೇಳದಿದ್ದರೆ ತಪ್ಪಾಗುತ್ತದೆಂದು ತಮ್ಮ ಇಲಾಖೆ ಬಗ್ಗೆ ದೀರ್ಘವಾಗಿ ಹೇಳಿದ್ದಾರೆ. ಅದರ ದಕ್ಷತೆಯನ್ನು ನಾನು ಅನೇಕ ಸಾರಿ ಮೆಚ್ಚಿದ್ದೇನೆ, ಅದರಲ್ಲೆ ಎರಡನೇ ಅಭಿಪ್ರಾಯವೇನಿಲ್ಲ. ಆದರೆ ಬೆಳೆ ನಾಶವಾಗಿ ರೈತರುಗಳು ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆಯಲ್ಲಿ ಜಂಟಿ ಸದನ ಸಮಿತಿ ರಚನೆಯಾಯಿತು. ಮಾನಸಿಕವಾಗಿ ಆ ಸಮಿತಿ ಬೇಕೆಂಬ ಇಚ್ಛೆ ಇತ್ತು ಮತ್ತು ಸಮಿತಿಯ ವರದಿ ಬರಲಿ ಎಂಬ ಉದ್ದೇಶವೂ ಇತ್ತು. ರೈತರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಮನೋಭಾವ ತಮ್ಮದಾಗಿದ್ದರೂ ಮಂತ್ರಿ ಮಂಡಲ ಬಿಟ್ಟು ಹೊರಗಡೆ ಬನ್ನಿ ಎಂದು ಸರ್ಕಾರಕ್ಕೆ ನೇರವಾಗಿ ಬೆದರಿಕೆಯನ್ನಾದರೂ ತಾವು ಹಾಕಬೇಕಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಅವರ ಮಾತಿಗೆ ಅಬ್ಜೆಕ್ಟ್ ಮಾಡುತ್ತೇನೆ. ಏಕೆಂದರೆ, ಯಾವಾಗಲೂ ವಾಟಾಳ್ ನಾಗರಾಜ್ ಅವರಾಗಲೀ, ಕಾಗೋಡು ತಿಮ್ಮಪ್ಪನವರಾಗಲೀ ಮಾತನಾಡುತ್ತಾ ಅದನ್ನು ಅರ್ಥಕ್ಕೆ ಬಿಡುತ್ತಾರೆ. ಅದಕ್ಕೋಸ್ಕರ ಹೇಳಬೇಕಾದರೆ, ಹೊರಗೆ ಬನ್ನಿ ಎಂದು ಸರಿಯಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಸ್ನೇಹ ಬಂಧನವೆನ್ನುವುದು ಎಷ್ಟರಮಟ್ಟಿಗಿದೆಯೆಂಬುದು ತಮಗೆ ಗೊತ್ತಿದೆ. ರಾಜೀನಾಮೆ ಕೊಡಬೇಕೆಂದು ಅವರ ಮನಸ್ಸಿನಲ್ಲಿದ್ದರೂ ಅದು ಅವರಿಗೆ ಬಿಟ್ಟಿದ್ದು, ರಾಜೀನಾಮೆ ಕೊಡುವುದು, ಬಿಡುವುದು ಅವರಿಗೆ ಬಿಟ್ಟದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರಿಗೆ ರಾಜೀನಾಮೆ ಕೊಡಿಸಬೇಕೆಂದು ತಮ್ಮ ಮನಸ್ಸಿನಲ್ಲಿ ಇದೆಯೆಂದಾಯಿತು.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಖಂಡಿತಾ ಇಲ್ಲಿ, ಅವರು ರಾಜೀನಾಮೆ ಕೊಡಬೇಕೆಂದು ತತ್ವಶಃ ನಾನು ಒಪ್ಪುವುದಿಲ್ಲ. ಆದರೆ, ಒಂದು ವಿಷಯ ಹೇಳುತ್ತೇನೆ : ವರದಿಯನ್ನು ಚಾಚೂ ತಪ್ಪದೆ ಪ್ರಾಮಾಣಿಕವಾಗಿ ಒಪ್ಪಬೇಕೆಂದು ಸಚಿವ ಸಂಪುಟದಲ್ಲಿ ಎಲ್ಲರನ್ನೂ ಒಪ್ಪಿಸಿದ್ದರೆ ನಿಜವಾಗಿಯೂ ಶಹಭಾಷ್‌ಗಿರಿ ನಿಮಗೆ ಸಿಗುತ್ತಿತ್ತು. ಆ ಮಟ್ಟಕ್ಕೆ ತಾವು ಹೋಗಲಿಲ್ಲ ಎನ್ನುವುದು ಒಂದು. ಈ ಕಡೆ ತಾವು ಏನು ಇದ್ದರಲ್ಲಾ, ನಮ್ಮ ಪಕ್ಷದಲ್ಲಿ ತಾವು ಕುಳಿತ್ತಿದ್ದಾಗ. ಸುಮಾರು ಐದು ವರ್ಷಗಳ ಕಾಲ ತಾವು ನಡೆಸಿರುವ ಹೋರಾಟ ಅನೇಕ ವಿಚಾರದಲ್ಲಿ ಅದೆಲ್ಲಾ ಮರೆತು ನೀವು ಹೊಸ ರೂಪ ಅಲ್ಲಿ ತಾಳಿದ್ದೀರಿ ಅದು ಸತ್ಯ, ತಾವು ಒಪ್ಪಿಕೊಳ್ಳಬೇಕು. ಆದರಿಂದ ಆ ಮಾತನ್ನು ತಾವು ಹೇಳುವಾಗ ಹೇಳಬೇಕಾಗುತ್ತದೆ. ಎರಡನೆಯದು ಬಹಳ ವಿಚಾರಗಳನ್ನು ಹೇಳಿದಿರಿ. ರೈತರ ಬಗ್ಗೆ ಅನೇಕ ಅನುಕೂಲಗಳು ಮತ್ತು ಆಗತಕ್ಕಂಥ ಬದಲಾವಣೆಗಳು, ಬೇರೆ ದೇಶದ ಬಗ್ಗೆ ಎಲ್ಲಾ ಹೇಳಿದ್ದೀರಿ. ನಾನು ಸುಮ್ಮನೆ ಒಂದೇ ಒಂದು ಹೇಳುತ್ತೇನೆ. ಇದೇ ವ್ಯವಸಾಯಕ್ಕೆ ಅಪಾಯಕಾರಿ ಬೆಳವಣಿಗೆ ಕಾಂಗ್ರೆಸ್ ಹುಲ್ಲು ಅಥವಾ ಗಿಡ ಎಂದು ಹೇಳಿ ದೇಶದಲ್ಲಿ ಬಂದಿದೆಯಲಾ, ಅದನ್ನು ಹೋಗಲಾಡಿಸುವುದಕ್ಕೆ ನಿಮ್ಮ ಕೈಯಲ್ಲಿ ಏನಾದರೂ ಪ್ರಯತ್ನ ನಡೆದಿದೆಯೇ? ನೀವೇನೂ ಗೊಬ್ಬರ ಕೊಡುವುದು ಬೇಡ. ನೀರು ಕೊಡುವುದು ಬೇಡ. ಅದು ಒಂದು, ಮೂರುವರೆ ಗಂಟೆ ನಾಲ್ಕು ಗಂಟೆ ಭಾಷಣ ಮಾಡಿದ್ದೀರಿ.

ಶ್ರೀ ಎಂ. ಚಿಮ್ಮನಕಟ್ಟಿ : ಕಾಂಗ್ರೆಸ್ ಗಿಡ ಅಲ್ಲ ಅದು. ಅದು ಪಾರ್ಥೇನಿಯಂ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮ್ಮ ಕಡೆಯಲ್ಲಾ ಕರೆಯುವುದು ಕಾಂಗ್ರೆಸ್ ಹುಲ್ಲು ಎಂತಲೇ. ಕಾಂಗ್ರೆಸ್ ಹುಲ್ಲನ್ನು ವಾಟಾಳ್ ನಾಗರಾಜ್‌ರವರು ಅಂದುಕೊಂಡಂತೆ ಸುಲಭವಾಗಿ ಅದನ್ನು ತೆಗೆಯಲಿಕ್ಕಾಗುವುದಿಲ್ಲ. ಬೆಂಕಿ ಹಾಕಿ ಸುಟ್ಟರೂ ಕೂಡ ಅದು ಹೋಗುವುದಿಲ್ಲ ಮತ್ತೆ ಅಲ್ಲಿಯೇ ಅದು ಮೊಳಕೆ ಹೊಡೆಯುತ್ತದೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಅದು ಸ್ವಾರಸ್ಯ ಇದೆ. ಆ ಕಳೆಗೆ ನಮ್ಮ ಕಡೆಯಲ್ಲಿ ಕಾಂಗ್ರೆಸ್ ಎಂದು ಹೇಳುವುದಿಲ್ಲ ಕಮ್ಯುನಿಸ್ಟ್ ಕಳೆ ಎಂದು ಹೇಳುತ್ತಾರೆ. ಇದು ತಾಪತ್ರಯ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 24 ಗಂಟೆಯೂ ಕಮ್ಯುನಿಸ್ಟೇ ಸ್ವಪ್ನದಲ್ಲಿ ಬರುವುದು. ಬಿಜೆಪಿ ಯವರಿಗೆ ಸ್ವಪ್ನದಲ್ಲಿ ಬರುವುದು ಕಮ್ಯುನಿಸ್ಟೇ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅದು ಕಾಂಗ್ರೆಸ್ ಹುಲ್ಲೋ ಪಾರ್ಥೇನಿಯಂ ಎಂಬುದು ಎರಡನೇ ಪ್ರಶ್ನೆ. ರೈತರು ಅದನ್ನೆ ಒಂದು ಔಷಧಿಯಾಗಿ ಕಂಡುಹಿಡಿದಿದ್ದಾರೆ. ಮೊನ್ನೆ ಬೀದರ್ ಗುಲ್ಬರ್ಗಾಕ್ಕೆ ಹೋದಾಗ ನೋಡಿದೆ ಕಾಂಗ್ರೆಸ್ ಹುಲ್ಲನ್ನು ಕೊಳೆ ಹಾಕಿ ಸುಮಾರು ಮೂರುತಿಂಗಳಾದ

ಮೇಲೆ ಅದರ ರಸವನ್ನು ನೀರಿಗೆ ಅದ್ದಿ ಹಿಂಡಿ ಅದಕ್ಕೆ ಗಂಧಕವನ್ನು ಫಿಕ್ಸ್ ಮಾಡಿ ಆಮೇಲೆ ಪೂರ್ಣ ಪ್ರಮಾಣದಲ್ಲಿ ಗದ್ದೆಗೆ ಸ್ಪ್ರೇ ಮಾಡಿದ್ದೇನೆ, ಮೂರು ವರ್ಷದಿಂದ ಅದಕ್ಕೆ ಯಾವುದೇ ಕಾಯಿಲೆ ಬಂದಿಲ್ಲ ಎಂದು ಅವನು ಹೇಳುತ್ತಾನೆ. ಇದನ್ನು ಯಾವ ಹುಲ್ಲು ಎಂದು ತಿಳಿದುಕೊಳ್ಳೋಣ ದಯವಿಟ್ಟು ಮಧ್ಯೆ ಪ್ರವೇಶಿಸಿ ತಾವೇ ಇದು ನಿಜವಾದ ಹುಲ್ಲು ಯಾವುದು?

ಅಧ್ಯಕ್ಷರು : ಇಲ್ಲಿ ಮಧ್ಯಾಹ್ನ ಊಟಕ್ಕೆ ಹೋದಾಗ ಒಂದು ಸಲಹೆ ಬಂದಿದೆ. ನಾನು ಮಧ್ಯಪ್ರವೇಶ ಮಾಡಿ ಮಾತನಾಡುವುದರಿಂದ ಬಹಳ ಸಮಯ ವ್ಯರ್ಥವಾಗುತ್ತದೆ. ಅದಕ್ಕೆ ನಾನು ಸುಮ್ಮನಿದ್ದು ಬಿಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಸುದೀರ್ಘವಾಗಿ ಭಾಷಣ ಮಾಡಿದ್ದಾರೆ. ಅವರು ಅನೇಕ ವಿಚಾರಗಳನ್ನು ಹೇಳಿದರಲ್ಲಾ, ಬಹಳ ಬದಲಾವಣೆಗಳ ಬಗ್ಗೆ. ಇಡೀ ವ್ಯವಸಾಯಕ್ಕೆ ಅಪಾಯಕಾರಿಯಾದ ಗಿಡ. ಗಾಳಿ ಬಂದರೆ ಸಾಕು. ಸುಮ್ಮನೆ ಬೆಳೆಯುತ್ತಿರುತ್ತದೆ. ಇಡಿ ವ್ಯವಸಾಯವನ್ನೇ ನಾಶ ಮಾಡಿರುವುದು ಈ ಕಾಂಗ್ರೆಸ್ ಗಿಡ ಅಥವಾ ಪಾರ್ಥೇನಿಯಂ. ಕಾಂಗ್ರೆಸ್‌ನವರು ಸಿಟ್ಟು ಮಾಡಿಕೊಳ್ಳಬೇಕಾಗಿಲ್ಲ. ಅದೇನೋ ಹೆಸರು ಬಂದು ಬಿಟ್ಟಿದೆ ನಾನೇನು ತಮಗೆ ಹೇಳುತ್ತಿದ್ದೇನೆಂದರೆ ಇದನ್ನು ಹೇಗಲಾಡಿಸುವ ಅನೇಕ ವಿಜ್ಞಾನಿಗಳು ನಮ್ಮಲ್ಲಿ ಇದ್ದಾರೆ. ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದೀರಿ. ಇದನ್ನು ಹೋಗಲಾಡಿಸುವ ವ್ಯವಸ್ಥೆ ತಮ್ಮಲ್ಲಿ ಇವತ್ತಿನವರೆಗೂ ಆಗಿಲ್ಲ. ಇದನ್ನೇನು ಈ ಒಂದು ಅಸಹಾಯಕತೆಯ ಬಗ್ಗೆ ತಾವೇನು ಹೇಳುತ್ತೀರಿ? ಎರಡನೆಯದಾಗಿ, ಅನೇಕ ಪದ್ಧತಿಯನ್ನು ತಂದಿದ್ದೀರಿ ರೈತರಿಗಾಗಿ, ಎತ್ತುಗಳಿಗೆ ಲಾಳ ಹೊಡೆಯುವ ಪದ್ಧತಿ ತಮಗೆ ಗೊತ್ತಿದೆ. ನಾಲ್ಕು ಕಾಲುಗಳನ್ನು ಕಟ್ಟಿ ಅದನ್ನು ಮಲಗಿಸಿ ಯಾರೋ ಲಾಳದ ಸಾಬರು ಎಂದು ಅದಕ್ಕೆ ಹೆಸರೇ ಇದೆ. ಇದಕ್ಕೇನು ಹೊಸ ವಿಧಾನ ಏನೂ ಇಲ್ಲವೇ? ತಾವೇನೂ ಹೇಳುತ್ತಿದ್ದೀರಲ್ಲಾ. ನಾಲ್ಕು ಕಾಲನ್ನು ಕಟ್ಟಿ ಹಸುವನ್ನು ಅಥವಾ ಎತ್ತುಗಳನ್ನು ನೆಲಕ್ಕೆ ಹಾಕಿ ಕ್ರೂರತನದಿಂದ ಲಾಳವನ್ನು ಹೊಡೆಯುತ್ತೀರಲ್ಲಾ, ಅದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲವೇ? ನೀವು ವಿಶ್ವವಿದ್ಯಾನಿಲಯದಲ್ಲಿ ಅನೇಕ ರೀತಿ ಸಂಶೋಧನೆ ತಯಾರಾಗಿದೆ ಎಂದು ಹೇಳುತ್ತೀರಲ್ಲಾ, ಈ ಲಾಳದ ಪದ್ಧತಿಯನ್ನು ತೆಗೆಯುತ್ತೀರಾ? ಇದರ ಬಗ್ಗೆ ಹೊಸ ವಿಧಾನವಿಲ್ಲವೇ? ಹೊಸ ವಿಧಾನವನ್ನು ತಾವೇನು ಕಂಡುಹಿಡಿದಿದ್ದೀರಿ ಮತ್ತು ಬಹಳಕಾಲದಿಂದ ನಮ್ಮಲ್ಲಿರುವ ಅದೇ ಗಾಡಿ, ಅದೇ ನೊಗ, ಅದೇ ಕಡಾಣೆ, ಅದೇ ಕೊಂಬಿನಲ್ಲಿ ಎಕ್ರಿ ಕಡಾಣೆ, ನೊಗ ಆ ವಿನ್ಯಾಸವನ್ನೇನಾದರೂ ಬದಲಾವಣೆ ಮಾಡಿ ಹೊಸ ದಿಕ್ಕಿಗೆ ಹೋಗುವ ರೀತಿ ತಾವೇನಾದರೂ ಮಾಡುತ್ತೀರಾ ಮತ್ತು ನೊಗ ಮತ್ತು ನೇಗಿಲು ಹಳೆಯ ಕಾಲದ ನೇಗಿಲುಗಳು ಏನಿವೆ, ಈ ನೇಗಿಲನ್ನು ಮತ್ತೆ ಹೊಸ ರೂಪದಲ್ಲಿ ರೈತರಿಗೆ ಕೊಡುವುದು. ಈಗ ನೀವು ಟ್ರ್ಯಾಕ್ಟರನ್ನು ಕೊಟಿದ್ದೀರಿ. ಬೇರೆ ಬೇರೆ ರೀತಿ ಕೊಟ್ಟಿದ್ದೀರಿ. ಹಳೆಯ ಕಾಲದ್ದು ಏನು ಇದೆ, ಮೊದಲು ರೈತ ಏನು ಹೇಳುತ್ತಿದ್ದ, ಎತ್ತುಗಳು ಭೂಮಿಯಲ್ಲಿ ಹೂಳಬೇಕು, ರೈತ ಭೂಮಿಯ ಒಳಗಡೆ ಹೋಗಬೇಕಾದರೆ ಪಾದರಕ್ಷೆ ಹಾಕಿಕೊಂಡು ಹೋಗುತ್ತಿರಲಿಲ್ಲ. ಆ ಭೂಮಿಯನ್ನು ದೇವರು ಎನ್ನುವ ದೃಷ್ಟಿಯಲ್ಲಿ ನೋಡುತ್ತಿದ್ದ. ಇವತ್ತು ಅದೆಲ್ಲಾ ಹದಗೆಟ್ಟಿದೆ. ಆದ್ದರಿಂದ ನೇಗಿಲು ಬದಲಾವಣೆ, ನೊಗದ ಬದಲಾವಣೆ,

ಗಾಡಿಯ ಬದಲಾವಣೆ ಈ ಲಾಳದ ಬದಲಾವಣೆಯನ್ನು ಎಷ್ಟರಮಟ್ಟಿಗೆ ತಾವು ಮಾಡಬಲ್ಲಿರಿ ಎಂಬುದನ್ನು ತಾವು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಭೈರೇಗೌಡ ಉತ್ತರದಿಂದ ಬಹಳ ನಿರೀಕ್ಷೆ ಮಾಡಿದ್ದೆ ರೈತರಿಗೇನಾದರೂ ಪರಿಹಾರವನ್ನು ಘೋಷಣೆ ಮಾಡಬಹುದು ಎಂದು ಹೇಳಿ. ಯಾವುದೇ ಪರಿಹಾರವನ್ನು ಘೋಷಣೆ ಮಾಡಿಲ್ಲ. ಮತ್ತು ಮುಖ್ಯವಾಗಿ ಸದನ ಸಮಿತಿಯಲ್ಲಿ ಮಾಡಿದ ಏನು ಶಿಫಾರಸ್ಸುಗಳು ಇವೆ, ಅದರ ಬಗ್ಗೆ ಏನೂ ತಮ್ಮ ಸ್ಪಷ್ಟವಾದ ಸರ್ಕಾರದ ಧೋರಣೆಯೇನು? ನೀವು ಇಲ್ಲಿ 6 ನೇ ತಾರೀಖು ಹೇಳುತ್ತೇವೆ ಎಂದು ಹೇಳಿ ಹೇಳಲಿಲ್ಲ. ಕಡೆಗೆ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ. ಹೆಕ್ಟೇರ್‌ಗೆ ಒಂದು ಎಕರೆಗೆ 500 ರೂಪಾಯಿ ಎಂದು ಹೇಳಿ ಹೆಕ್ಟೇರ್‌ಗೆ 750 ರೂಪಾಯಿ ಮಾಡುತ್ತೀರಿ ಎಂದು ಆಯಿತು. ಕಡೆಗೆ ಯಾವುದು ಎಂದು ಹೇಳಿ ಇವತ್ತಿಗೂ ಕೂಡ ಸ್ಪಷ್ಟವಾಗಿ ಸರ್ಕಾರ ಹೇಳಿಲ್ಲ. ಅದು ತೊಗರಿಗೆ ಮಾತ್ರ ಇದುವರೆಗೂ ಸ್ಪಷ್ಟವಾಗಿ ಸರ್ಕಾರ ಯಾವುದೇ ನಿರ್ಧಾರವನ್ನು ಪ್ರಕಟಿಸಿಲ್ಲ. ಸದನ ಸಮಿತಿಯ ವರದಿಯ ಬಗ್ಗೆ ಯಾವುದೇ ರೀತಿ ಸ್ಪಷ್ಟವಾಗಿ ಪ್ರಕಟಿಸದೇ ಇರುವುದರಿಂದ ನೀವೇನು ಪರಿಹಾರವನ್ನು ರೈತರಿಗೆ ಕೊಡುತ್ತಿದ್ದೀರಿ, ಆತ್ಮಹತ್ಯೆ ಮಾಡಿಕೊಂಡಂಥವರ ಬಗ್ಗೆ ಬಹಳಷ್ಟು ಮಾತನಾಡಿದಿರಿ ರೈತರ ಪರಿಸ್ಥಿತಿ, ದುಸ್ಥಿತಿ ಏನಾಗಿದೆ ಎಂದು. ಆದರೆ ಆತ್ಮಹತ್ಯೆ ಮಾಡಿಕೊಂಡವರ ಬಗ್ಗೆ ನಮ್ಮ ಸರ್ಕಾರದ ಸ್ಪಷ್ಟವಾದ ನಿಲುವೇನು? ಏನು ತೀರ್ಮಾನ ತೆಗೆದುಕೊಂಡಿದ್ದೀರಿ? ನೀವೇನು ಪರಿಹಾರವನ್ನು ಕೊಡುತ್ತೀರೋ ಇಲ್ಲವೋ ಅಥವಾ ಯಾವ ರೀತಿ ಪರಿಹಾರವನ್ನು ಕೊಡುತ್ತೀರಿ? ಯಾವುದರ ಬಗ್ಗೆಯೂ ಸ್ಪಷ್ಟವಾಗಿ ನೀವು ಹೇಳಿಲ್ಲ. ಎರಡನೆಯದು ಕೀಟನಾಶಕಗಳು. ನಿಮಗೊಂದು ಮಾಹಿತಿಯನ್ನು ಕೊಡುತ್ತಿದ್ದೇನೆ. 1992-93 ರಿಂದ ನಿರಂತರವಾಗಿ ಕೋರ್ಟು ಮತ್ತು ಸರ್ಕಾರ ಫೆಸ್ಟಿಸೈಡ್ಸ್‌ನ್ನು ತಯಾರು ಮಾಡುವ ಕಂಪನಿಗಳಿಗೆ ಫೈನನ್ನು ಹಾಕಿದೆ. ನಾನು ಕಂಪನಿಯ ಹೆಸರುಗಳನ್ನು ಓದುತ್ತೇನೆ. ಭೈರೇಗೌಡರು ಅದನ್ನು ಗಮನಿಸಬೇಕಾಗುತ್ತದೆ. 92-93ರಲ್ಲಿ ಸುಮಾರು 9 ಕಂಪನಿಗಳಿಗೆ ಫೈನನ್ನು ಹಾಕಿದ್ದಾರೆ. ಬೋಂಕನ್ ಫೆಸ್ಟಿಸೈಡ್ಸ್‌ನವರಿಗೆ ಹಾಕಿದ್ದಾರೆ. ರಾಮ್‌ಸೈಡ್ಸ್ ಮದ್ರಾಸ್‌ನವರಿಗೆ ಮತ್ತೆ ಹಾಕಿದ್ದಾರೆ. ಮತ್ತೆ ಅದೇ ರಾಮ್‌ಸೈಡ್ಸ್ ಮದ್ರಾಸ್‌ನವರಿಗೆ ಮೂರು ವರ್ಷ ಕಂಟಿನ್ಯೂಯಸ್ ಆಗಿ ಅವರಿಗೆ ಒಂದು ಸಾವಿರ ರೂಪಾಯಿ ಫೈನನ್ನು ಹಾಕಿದ್ದಾರೆ ಡಿಫೆಕ್ಟೀವ್ ಪೆಸ್ಟಿಸೈಡ್ಸ್ ಎಂದು ಹೇಳಿ. ಮತ್ತೆ ಆಗ್ರೋ ಇಂಡಸ್ಟ್ರೀಸ್, ಬೆಂಗಳೂರು. ಇವರು ಮಹಾನುಭಾವರು, ಬೆಂಗಳೂರಿನಲ್ಲಿಯೇ ಇದ್ದಾರೆ. ಇದನ್ನು ಸರ್ಕಾರ ಒಪ್ಪಿರುವ ಒಂದು ಕಂಪನಿ. ಈ ಕಂಪನಿ ಸತತವಾಗಿ 92 ನೇ ಇಸವಿಯಿಂದ ಈ ಕಂಪನಿಗೆ ಫೈನ್ ಹಾಕುತ್ತಲೇ ಬಂದಿದ್ದಾರೆ. 92, 93, 94, 95, 96, 97 ರಲ್ಲಿಯೂ ಹಾಕಿದ್ದಾರೆ. ಈ ಕಂಪನಿ ಇನ್ನೂ ಔಷಧಿಗಳ ಸರಬರಾಜನ್ನು ಮಾಡುತ್ತಲೇ ಇದೆ. ಹಾಗಾದರೆ ನೀವು ಏನು ಕ್ರಮ ತೆಗೆದುಕೊಂಡಿರಿ? ನಿಮ್ಮ ಹತ್ತಿರ ಏನೂ ಕಾನೂನು ಇಲ್ಲವೇ? ನನ್ನ ಹತ್ತಿರ ಮಾಹಿತಿ ಇದೆ, ಕೊಡುತ್ತೇನೆ. ನೀವು ಪರಿಶೀಲನೆ ಮಾಡಿ. ನಿಮ್ಮ ಹತ್ತಿರವೂ ಬಹುಶಃ ಇರುತ್ತದೆ. ನಿಮ್ಮ ಇಲಾಖೆಯಲ್ಲಿ ಇರುತ್ತೆ. ಇಷ್ಟು ಕಂಪನಿಗಳಿಗೆ ನಿರಂತರವಾಗಿ ಫೇನ್ ಹಾಕುತಾ ಬಂದರೂ ಕೂಡ ನೀವು ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಿಲ್ಲ.

ನೀವು ಈಗಲಾದರೂ ಅದರ ಬಗ್ಗೆ ಸ್ಪಷ್ಟವಾಗಿ ಹೇಳ ಬೇಕಾಗುತ್ತದೆ. ಏನುಕ್ರಮ ತೆಗೆದುಕೊಳ್ಳುತ್ತೀರಿ. ಒಂದು ಸಲವಲ್ಲ, ಎರಡು ಸಲವಲ್ಲ, ಪ್ರತಿವರ್ಷ 92ರಿಂದ ನಿರಂತರವಾಗಿ ಬೆಂಗಳೂರು ಆಗ್ರೋ ಕೆಮಿಕಲ್ ಇಂಡಸ್ಟ್ರೀಸ್‌ನವರಿಗೆ ನಿರಂತರವಾಗಿ ಫೈನ್ ಹಾಕಿದ್ದಾರೆ. ಏನು ಕ್ರಮ ತೆಗೆದುಕೊಳ್ಳಲಿಲ್ಲ. ಹಾಗೆಯೇ ಮತ್ತೆ ಕಳಪೆ ಬಿತ್ತನೆ ಬೀಜವನ್ನು ಸರಬರಾಜು ಮಾಡುವ ಮಲ್ಟಿ ನ್ಯಾಷನಲ್ ಕಾರ್ಪೊರೇಷನ್ಸ್ ಬಗ್ಗೆ ಮತ್ತು ಬೇರೆ ಬೇರೆ ಕಂಪನಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇವುಗಳನ್ನು ತಾವು ಸ್ಪಷ್ಟಪಡಿಸಬೇಕಾಗುತ್ತದೆ. ಅದು ಯಾವುದನ್ನು ನೀವು ಇವತ್ತು ನಿಮ್ಮ ಭಾಷಣದಲ್ಲಿ ಇಷ್ಟು ಸುದೀರ್ಘವಾಗಿ ಮಾತನಾಡಿದಾಗಲೂ ಕೂಡ ಮುಖ್ಯವಾದ ಅಂಶಗಳ ಬಗ್ಗೆ ನೀವು ಯಾವುದೇ ರೀತಿಯಾದ ಸ್ಪಷ್ಟನೆಯನ್ನೂ ಕೊಡಲಿಲ್ಲ.

4.20 ಪಿ.ಎಂ.

ನಿರ್ದಿಷ್ಟವಾಗಿ ಕೆಲವು ಕಂಪನಿಗಳನ್ನು ಹೆಸರಿಸಿ ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಿ, ಅವುಗಳನ್ನು ಬ್ಲಾಕ್‌ಲಿಸ್ಟ್ ಮಾಡಿ, ಅವರ ಲೈಸೆನ್ಸ್ ಕ್ಯಾನ್ಸಲ್ ಮಾಡಿ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನಿಮ್ಮ ಕಣ್ಣ ಮುಂದೆಯೇ ಇರತಕ್ಕಂಥ ಕಂಪನಿಗಳ ಮೇಲೆ ನೀವು ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಈ ವಿಷಯದ ಬಗ್ಗೆ ರೈತರಿಗೆ ಪರಿಹಾರ ನೀಡುವ ಬಗ್ಗೆ ಹಾಗೂ ಬಿತ್ತನೆ ಬೀಜ, ಈ ಮೂರು ವಿಷಯಗಳ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಧೋರಣೆಯನ್ನು ಸ್ಪಷ್ಟಪಡಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ಕಳಕಳಿಯಿಂದ ಬಹಳ ಗಂಭೀರವಾಗಿ ಭಾಷಣ ಮಾಡಿದರು. ಈ ಪ್ರಜಾಪ್ರಭುತ್ವದಲ್ಲಿ ರೈತರಿಂದಲೇ ಈ ದೇಶ, ರೈತ ಇಲ್ಲವೆಂದರೆ ಬೇರೆ ಯಾರೂ ಉಳಿಯುವುದಿಲ್ಲ. ಆದರೆ ಕಾರ್ಯಕ್ರಮ ಏನೆಂದು ಮಾನ್ಯ ಕೃಷಿ ಸಚಿವರು ಸರಿಯಾಗಿ ಘೋಷಣೆ ಮಾಡಲಿಲ್ಲ ನಾವೆಲ್ಲರೂ ಕೂಡ ರೈತರ ಬಗ್ಗೆ ಮಾತನಾಡುವವರೇ. "ಗಾಣಗಿತ್ತಿ ಅಯ್ಯೋ ಎಂದರೆ ಮಗುವಿನ ನೆತ್ತಿ ತಣ್ಣಗೆ ಆಗುವುದಿಲ್ಲ". ನಮ್ಮೂರಿನಲ್ಲಿ ಒಬ್ಬ ನನ್ನನ್ನು ಬೆಳಿಗ್ಗೆಯೇ ಮಾತನಾಡಿಸಲು ಬಂದಿದ್ದ. ನಾನು ಆತನನ್ನು ನಿನ್ನ ಹೆಸರೇನು? ಎಂದು ಕೇಳಿದೆ. ಆತ ನನ್ನ ಹೆಸರನ್ನು 'ಕುಬೇರ' ಎಂದು ಹೇಳಿದ. ನಿನಗೇನು ಬೇಕು ಎಂದು ನಾನು ಅವನನ್ನು ಕೇಳಿದ್ದಕ್ಕೆ ನನಗೆ ತಿಂಡಿ ತಿನ್ನಲು 2 ರೂ ದುಡ್ಡು ಬೇಕು ಅಂದ. ಆ ರೀತಿ, ನಾವು ಈ ರೈತರ ಬಗ್ಗೆ ಇಷ್ಟೆಲಾ ಭಾಷಣ ಮಾಡುತ್ತೇವೆ, ಆದರೆ ಬಹಳ ಏನೂ ಚಿಂತನೆ ಮಾಡಲಿಲ್ಲ. ನಮ್ಮಲ್ಲಿರುವ ಸಾವಯವ ಕೃಷಿ ಬಗ್ಗೆ ನಾವು ಮತ್ತು ನೀವೆಲ್ಲಾ ಮಾತನಾಡುತ್ತೇವೆ. ಅದರಿಂದ ಗೊಬ್ಬರ ಒದಗಿಸಲಿಕ್ಕೆ ಎಲ್ಲಾ ಫ್ಯಾಕ್ಟರಿಗಳನ್ನೂ ಕೂಡ ನಾವು ಇನ್‌ವಾಲ್ವ್ ಮಾಡಬೇಕು. ಮಡ್ಡಿಗಳಲ್ಲಿ ವೇಸ್ಟ್ ಕಸ, ತೊಪ್ಪೆ ಎಲ್ಲಾ ಒಂದೆಡೆ ಗುಡ್ಡೆ ಹಾಕಿ, ಅದರಲ್ಲಿ ನೀರು ಬಿಡುತ್ತಾರೆ. ಅದರಲ್ಲಿ ಗಂಧಕದ ಅಂಶ ಬಹಳ ಜಾಸ್ತಿ. ಆ ಗೊಬ್ಬರದ ಮೇಲೆ ನೀರು ಸ್ಪ್ರೇ ಮಾಡಿದರೆ, ಸಾವಿರಾರು ಟನ್ ಸಾವಯವ ಗೊಬ್ಬರವನ್ನು ರೈತರಿಗೆ ವಿತರಣೆ ಮಾಡುವುದರಲ್ಲಿ ಎಲ್ಲಾ ಕಾರ್ಖಾನೆಗಳನ್ನು ಇನ್‌ವಾಲ್ವ್‌ಮೆಂಟ್ ಮಾಡತಕ್ಕ ಕೆಲಸವನ್ನು ತಾವು ದಯವಿಟ್ಟು ಮಾಡಿ.

ಮಾನ್ಯ ಕೃಷಿ ಸಚಿವರು ಯೂನಿವರ್ಸಿಟಿ ಬಗ್ಗೆ ಆಗಲೇ ಮಾತನಾಡಿದರು. ನಾನು ತಮಗೆ ಭಾಷಣ ಮಾಡುವಾಗ ಒಂದು ಸಲಹೆ ಕೊಟ್ಟಿದ್ದೆ. ಹಳೆಯ ಬಿತ್ತನೆ ಬೀಜಗಳನ್ನು ಶೇಖರಿಸಲು ಚಿಂತನೆ ಮಾಡಬೇಕು. ಅದು ಬಹಳ ಮುಖ್ಯವಾದಂತಹ ಕಾರ್ಯಕ್ರಮ. ನಾಳೆ ನೀವು ಮತ್ತು ನಾವು ಸಾಯಬಹುದು, ಮುಂದೆ ನಮ್ಮ ಸಾಂಸ್ಕೃತಿಕ ತಳಿಗಳನ್ನು ಸಾಯಿಸಿ ಬಿಟ್ಟರೆ, ಪೂರ್ತಿ ರೈತರನ್ನು ನಾಶ ಮಾಡಿದಂತಾಗುತ್ತದೆ. ಒಂದಾನೊಂದು ಕಾಲಕ್ಕೆ ನ್ಯಾಫ್ತಾ ತೀರಿಹೋಗಿ ರಾಸಾಯನಿಕ ಗೊಬ್ಬರವೇ ಸಿಗುವುದಿಲ್ಲ. ಆಗ ತಾವು ಯಾವ ಬಿತ್ತನೆ ಬೀಜ ಹುಡುಕುತ್ತೀರಿ? ರಾಸಾಯನಿಕ ಗೊಬ್ಬರವೇ ಇಲ್ಲದೇ ಸಾವಯವ ಕೃಷಿ ಮೂಲಕ ಬೆಳೆಯುತ್ತಾ ಇರತಕ್ಕಂಥ ಬಿತ್ತನೆಗಳ ಶೇಖರಣೆಯನ್ನು ಎರಡು ಯೂನಿವರ್ಸಿಟಿಯವರು ಮಾಡತಕ್ಕಂಥ ಕೆಲಸವನ್ನು ತಾವು ಮಾಡಿಸಿ. ಇಷ್ಟೊಂದು ದೊಡ್ಡ ರಾಜ್ಯದಲ್ಲಿ ಕಬ್ಬಿನ ಬಗ್ಗೆ ಯಾವುದಾದರೂ ರೀಸರ್ಚ್ ಮಾಡಬೇಕೆಂದರೆ ಅದಕ್ಕೆ ಅವಕಾಶ ಇಲ್ಲ, ಅದಕ್ಕಾಗಿ ನಾವು ದೂರದ ಕೊಯಮತ್ತೂರಿಗೆ ಹೋಗಬೇಕಾಗಿದೆ. ನಾವು ಸುಮ್ಮನೆ ಇಲ್ಲಿ ದೊಡ್ಡದಾಗಿ ಇಷ್ಟೊಂದು ಭಾಷಣ ಮಾಡುತ್ತೇವೆ. ಕಬ್ಬಿನ ಬಗ್ಗೆ ಪ್ರಪಂಚದಾದ್ಯಂತ ಸುಮಾರು ಎರಡು ಸಾವಿರ ತಳಿಗಳಿವೆ. ಇವತ್ತು ಕೇವಲ 15-20 ತಳಿಗಳನ್ನು ಪರಿಚಯಿಸುವುದರಲ್ಲೇ ನಾವು ವಿಫಲರಾಗಿದ್ದೇವೆ. ಆದ್ದರಿಂದ ಗಂಭೀರವಾಗಿ ಕೃಷಿ ಇಲಾಖೆಯು ಕಬ್ಬಿನ ತಳಿ ಬಗ್ಗೆ ರೀಸರ್ಚ್ ಮಾಡತಕ್ಕ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಮಾನ್ಯ ಕೃಷಿ ಸಚಿವರಿಗೆ ಹೇಳಬಯಸುತ್ತೇನೆ. ದಯವಿಟ್ಟು ಇನ್ನು ಇರತಕ್ಕ ಒಂದೂವರೆ ವರ್ಷಗಳಲ್ಲಿ ಮಾರ್ಕೆಟಿಂಗ್ ಇತ್ಯಾದಿ ಕ್ಷೇತ್ರಗಳಲ್ಲಿ ರೈತರ ಸಮಗ್ರ ಅಭಿವೃದ್ಧಿ ಬಗ್ಗೆ ತಾವು ಯೋಜನೆ ಮಾಡಬೇಕೆಂದು ಹೇಳುತ್ತೇನೆ. ನಾನು ಈಗ ಹೇಳಿದ ಎರಡರ ಬಗ್ಗೆ ಇನ್ನೊಂದು ಸಾರಿ ಶೂನ್ಯ ಕೃಷಿ ಸಚಿವರು ಚಿಂತನೆ ಮಾಡಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ರೈತರು ಈ ಸ್ಥಿತಿಯಲ್ಲಿ ಇರುವುದಕ್ಕೆ ಇದೇ ಕಾರಣ. ಯಾರೂ ಅವರ ಬಗ್ಗೆ ಕೆಟ್ಟದಾಗಿ ಮಾತನಾಡಲಿಕ್ಕೆ ಸಮರ್ಥರಿಲ್ಲ, ಯಾರೂ ಅವರಿಗೆ ಒಳ್ಳೆಯದು ಮಾಡುವಂತಹ ದೊಡ್ಡ ಮನುಷ್ಯರೂ ಕೂಡ ಇಲ್ಲ. ನಾವು ರೈತರ ಬಗ್ಗೆ ಮಾತೆಲ್ಲಾ ಬಹಳ ಒಳ್ಳೆಯದೇ ಆಡುತ್ತೇವೆ. ಆದರೆ ಅವರಿಗೆ ನಾವು ಮಾಡಿದ್ದೇನು ಎಂದರೆ, ಸೊನ್ನೆ. ಮಾನ್ಯ ಕೃಷಿ ಸಚಿವರು ಮಾಡಿದ ನಾಲ್ಕೂವರೆ-ಐದು ಗಂಟೆಗಳ ಭಾಷಣದಲ್ಲಿ ತಾವು ಮಾಡಿದ ಸಾಧನೆಗಳ ಬಗ್ಗೆ ಏನಾದರೂ ಅವರು ಹೇಳುತ್ತಾರೆಂದು ನಾನು ಕಾದಿದ್ದೆ. ಅವರು ರೈತರಿಗೆ ಏನೂ ಹೊಸದಾಗಿ ಮಾಡಿದಂತೆ ಕಾಣಲಿಲ್ಲ. ಅದಕ್ಕಿಂತ ನನಗೆ ಹೆಚ್ಚು ನೋವಾಗಿದ್ದು, ಮಾನ್ಯ ಲಕ್ಷ್ಮಣಯ್ಯನವರು ಒಬ್ಬರ ಹೆಸರನ್ನು ಹೇಳಿ, ಎರಡೂ ವಿಶ್ವವಿದ್ಯಾನಿಲಯಗಳನ್ನು ವಹಿಸಿಕೊಂಡು ಮಾತನಾಡಿದರು. ಅವರು ಇಲ್ಲದಿದ್ದರೆ ರೈತರೇ ಇರುತ್ತಿರಲಿಲ್ಲ, ಅವರು ಇಲ್ಲದಿದ್ದರೆ ರಾಗಿಯೇ ಇರುತ್ತಿರಲಿಲ್ಲ, ಅವರು ಇಲ್ಲದಿದ್ದರೆ ಭತ್ತವೇ ಇರುತ್ತಿರಲಿಲ್ಲ ಎನ್ನುವ ಮಟ್ಟಕ್ಕೆ ಅವರು ಮಾತನಾಡಿದರು. ಇಂಡಾಫ್ ವೆರೈಟಿ ಬಿಟ್ಟು ಇತರ ಹೊಸದಾಗಿ ಯಾವುದಾದರೂ ರಾಗಿಯ ತಳಿಯನ್ನು ನಿಮ್ಮ ವಿಶ್ವವಿದ್ಯಾನಿಲಯದವರು ಇಂಪ್ರೂವ್ ಮಾಡಿದ್ದಾರೆಯೇ ಎಂದು ನಾನು ಅವರನ್ನು ಕೇಳಿದೆ. ಅಕ್ಟೋಬರ್-ನವೆಂಬರ್ ಬಂದರೆ ನಿಮ್ಮ ಇಂಡಾಫ್ ವೆರೈಟಿಯಲ್ಲಿ ಒಂದೇ ಒಂದು

ಕಾಳೂ ಕೂಡ ತೆನೆಯಲ್ಲಿ ಉಳಿಯುವುದಿಲ್ಲ. ಎಲ್ಲಾ ಉದುರಿ ಹೋಗುತ್ತದೆ. ಅದಕ್ಕೆ ಏನಾದರೂ ಸಂಶೋಧನೆ ಮಾಡಿ ಎಂದು ನಾವು ಕೇಳಿದ್ದೆವು, ಬರೆದು ಕಳುಹಿಸಿದ್ದೆವು. ಏನೂ ಮಾಡಲಿಲ್ಲ. ರಾಗಿ ಬೆಳೆಯವುದೇ ವಾಸ್ತವಿಕವಾಗಿ ಬೇರೆ ವಿಷಯ, ಮಾತನಾಡುವುದೇ ಬೇರೆ ವಿಷಯ. ಅದನ್ನು ಬಿಟ್ಟು, ಆಗ್ರೋ ಇಂಡಸ್ಟ್ರೀಸ್ ಅನ್ನೂ ಕೂಡ ನೀವು ಡಿಫೆಂಡ್ ಮಾಡಿಕೊಂಡಿದ್ದು ನನಗೆ ಭಾರೀ ನೋವಾಗುತ್ತದೆ. ಸೆಂಟ್ರಲೈಸ್ ಮಾಡಿ, ಎಲ್ಲಾ ಸಬ್ಸಿಡಿಯನ್ನು ಅಲ್ಲಿ ತುರುಕಿ, ಅಡ್ವಾನ್ಸ್‌ನಲ್ಲಿ ಬಿಲ್ ಕೊಡಿಸಿ ಬಿಟ್ಟು ನೀವು ಇವತ್ತು ನಮಗೆ ಇನ್‌ಪುಟ್ಸ್ ಅನ್ನು ಸಪ್ಲೈ ಮಾಡಿಸುತ್ತಿದ್ದೀರಿ, ನಮಗೆ ಮಟೀರಿಯಲ್ಸ್ ಸಪ್ಲೈ ಮಾಡುತ್ತೀರಿ ಎಂದು ನಾವು ಮಾತನಾಡಿದ್ದೆವು. ಆ ಸ್ಥಿತಿಯಲ್ಲಿ ನೀವು ಅಂತಹ ಸಂಸ್ಥೆಗಳು ಇರಲೇಬೇಕು ಎಂದು ಒಂದು ಮಾತಿನಲ್ಲಿ ಹೇಳಿ ಮುಗಿಸಿಬಿಟ್ಟಿರಿ. ಅವರು ಯಾರ ಕಾಸ್ಟ್‌ನಲ್ಲಿ ಇದ್ದಾರೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಸನ್ಮಾನ್ಯ ಬೈರೇಗೌಡರು ಇವತ್ತು ತಮ್ಮ ಭಾಷಣ ಆರಂಭ ಮಾಡಿದಾಗ ನಾವು ಭಾರೀ ಆಸೆ ಇಟ್ಟುಕೊಂಡು ಅವರ ಭಾಷಣ ಕೇಳುತ್ತಿದ್ದೆವು. ಆದರೆ ಅವರು ಬರುತ್ತಾ ಬರುತ್ತಾ ಸರ್ಕಾರದ ವಕ್ತಾರರು ಆಗಿಬಿಟ್ಟರು ಅಷ್ಟೆ. ನಾನು ಮಂತ್ರಿಯಾಗಿರುವುದರಿಂದ ಏನನ್ನಾದರೂ ನಾನು ವಹಿಸಿಕೊಳ್ಳಬೇಕು ಎಂದು ಹೇಳಿ ನೀವು ಈ ರೀತಿ ಮಾಡಿದಿರಿ ಎನಿಸುತ್ತದೆ. ಇದನ್ನು ಈ ರಾಜ್ಯದ ರೈತರು ನಿರೀಕ್ಷೆ ಮಾಡಿರಲಿಲ್ಲ. ದಯವಿಟ್ಟು ನಮಗೆ ನೇರವಾಗಿ ಅನುಕೂಲವಾಗುವಂತಹ ಯಾವುದಾದರೂ ಆಲೋಚನೆಯನ್ನು ತಾವು ಮಾಡಬೇಕು. ನಾವು ನಿಮಗೆ ಅವತ್ತಿನಿಂದ ಕೇಳುತ್ತಿರುವುದಿಷ್ಟೇ, ರೈತರ ಹೆಸರಿನಲ್ಲಿ ನೀವು ಏನೇನು ಮಾಡುತ್ತೀದ್ದೀರಿ? ಕಳೆದ ಎರಡು ವರ್ಷಗಳಲ್ಲಿ ನೀವು ಕೇವಲ 175 ಟ್ರ್ಯಾಕ್ಟರ್‌ಗಳಿಗೆ ಮಾತ್ರ ಸಬ್ಸಿಡಿ ಕೊಟ್ಟಿದ್ದೀರಿ, ಆದರೆ ನೀವು ಟ್ರಾಕ್ಟರ್‌ಗೆ ಸಬ್ಸಿಡಿ ಕೊಡುತ್ತೇವೆಂದು ಹೇಳಿ ಎರಡು ಗಂಟೆ ಮಾತನಾಡಿಬಿಟ್ಟಿರಿ. ಎರಡು ವರ್ಷದಲ್ಲಿ ಕೇವಲ 140 ಪವರ್ ಟಿಲ್ಲರ್ಸ್‌ಗೆ ಸಬ್ಸಿಡಿ ಕೊಟ್ಟು ಅದನ್ನು ಇಲ್ಲಿ 15 ನಿಮಿಷ ಭಾಷಣ ಮಾಡಿ ಹೇಳಿದರೆ ಹೇಗೆ? 30 ಹೆಚ್.ಪಿ.ಗಿಂತ ಕೆಳಗಡೆ ಇರುವ ಟ್ರಾಕ್ಟರ್‌ಗಳಿಗೆ ಮಾತ್ರ ತಾಲ್ಲೂಕಿಗೊಂದರಂತೆ 30 ಸಾವಿರ ರೂ.ಗಳನ್ನು ನೀವು ಸಬ್ಸಿಡಿಯಾಗಿ ಕೊಡುತ್ತಿದ್ದೀರಿ. ಹೀಗಿರುವಾಗ ಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದಾರೆ. ಎಂದು ಇದೂ ಕೂಡ ಒಂದು ದೊಡ್ಡ ಸುದ್ದಿಯಾಗುತ್ತದೆ. ಎಷ್ಟು ಯೂನಿಟ್ ಸ್ಪ್ರಿಂಕ್ಲರ್ ಇರಿಗೇಷನ್ ಸೆಸ್ ನಮಗೆ ಕೊಡುತ್ತಿದ್ದೀರಿ? 8-10 ಮಾತ್ರ ನೀವು ನಮಗೆ ಇದರಲ್ಲಿ ಕೊಡುತ್ತಿದ್ದೀರಿ. ಕೇವಲ ಎಷ್ಟು ಮಾತ್ರ ಕೊಟ್ಟು ಅದಕ್ಕೊಂದು ದೊಡ್ಡ ಕಾರ್ಯಕ್ರಮ ಎಂದು ಹಾಕಿದ್ದೀರಿ. ತಾವು ಸ್ಪಷ್ಟವಾಗಿ ಉತ್ತರ ಹೇಳಬೇಕು, ವಾಟರ್ ಶೆಡ್ ಕಾರ್ಯಕ್ರಮದಲ್ಲಿ ತಾವೇನು ಕಡಿಮೆ ಹಣ ಖರ್ಚು ಮಾಡಿದ್ದೀರಿ, ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ತಾವು ಕಡಿಮೆ ಹಣ ಖರ್ಚು ಮಾಡಿದ್ದೀರಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ದುಡ್ಡೇ ಕೊಟ್ಟಿಲ್ಲವೆಂದು 2-3 ದಿವಸ ನಾವಿಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇದೆಲ್ಲಾ ರೈತರ ಆಗು ಹೋಗುಗಳಿಗೆ ಸಂಬಂಧಪಟ್ಟಿದೇ ಅಲ್ಲವೇ? ಅದನ್ನು ಸರಿಪಡಿಸಲಿಕ್ಕೆ ತಾವೇನು ಕಾರ್ಯಕ್ರಮ ರೂಪಿಸುತ್ತೀರಿ ಎಂಬುದನ್ನು ಮಾನ್ಯ ಕೃಷಿ ಸಚಿವರು ಹೇಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಸಚಿವರು ಪೇಟೆಂಟ್ ಕಾಯ್ದೆ ಬಗ್ಗೆ ನಿಮ್ಮ ನಿಲುವು ಏನು ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು.

ಶ್ರೀ ಬಿ.ಆರ್. ಯಾವಾಗಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ಹೇಗೆ ರಾಗಿ ಬಹಳ ಮುಖ್ಯ ಬೆಳೆಯೋ, ಉತ್ತರ ಕರ್ನಾಟಕದಲ್ಲಿ ಹತ್ತಿ ಬಹಳ ಮುಖ್ಯವಾದಂತಹ ವಾಣಿಜ್ಯ ಬೆಳೆಯಾಗಿದೆ. ಇವತ್ತು ಅದೊಂದು ತರಹ ಶಾಪವಾಗಿ ಪರಿಣಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿರಲೇ ಬೇಕು. ಈಗ್ಗೆ ಸುಮಾರು 20 ವರ್ಷಗಳ ಹಿಂದೆ 'ವರಲಕ್ಷ್ಮಿ' ವರವಾಗಿ ಬಂತು ಎಂದು ಹೇಳಲಾಗಿತ್ತು. ಆಗ ವಿದೇಶಗಳಲ್ಲಿ ಸಹಾ ಆ ತಳಿಯ ಹತ್ತಿ ಬೀಜಗಳಿಗೆ ಬೇಡಿಕೆ ಇತ್ತು. ಆದರೆ ಇವತ್ತು ಹತ್ತಿ ಬೆಳೆಯುವಂತಹ ರೈತ, ಅದೊಂದು ತರಹ ಸೋಂಕು ರೋಗ ಎಂದು ಹೇಳಿದರೂ ತಪ್ಪಾಗಲಿಕಿಲ್ಲ, ಬೆಳೆಯಲೇಬೇಕು. ಆದರೆ ಬೆಳೆದಾಗ ಪ್ರತಿವರ್ಷ ಒಂದು ಎಕರೆಗೆ 10 ಸಾವಿರ ರೂ.ಗಳನ್ನಾದರೂ ನಾವು ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಅವಾಗಿನ ಲಾಂಗ್ ಸ್ಟೇಪಲ್ 'ವರಲಕ್ಷ್ಮಿ' ಹತ್ತಿ, ಡಾ : ಕಾತರಿಕಿಯವರು ಕಂಡು ಹಿಡಿದಿದ್ದರು, ಅಲ್ಲಿಂದ ಇಲ್ಲಿಯವರೆಗೆ ಅದು ಹೋಗಿ ಸುಮಾರು 40 ಕಾಂಟ್‌ನ ಹತ್ತಿ ಬೆಳೆ ಇದ್ದುದು, ಅದು ಡಬ್ಬಲ್ ಫೋರ್ ಅಗಿರಬಹುದು, ಅದು ಎಷ್ಟರ ಮಟ್ಟಿಗೆ ಒಳ್ಳೆಯ ಬೀಜ ಇರುತ್ತದೋ, ಮತ್ಯಾವುದು ಬರುತ್ತದೋ, ಅನೇಕ ಸ್ಪೂರಿಯಸ್ ಮೆಟೀರಿಯಲ್ಸ್ ಬಂದು ಇವತ್ತು ಬೆಳೆಯುವಂತಹ ರೈತರ ಪರಿಸ್ಥಿತಿ ಸಂಪೂರ್ಣ ಕೆಟ್ಟು ಹೋಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದರ ಬಗ್ಗೆ ಸರ್ಕಾರದ ಕಾರ್ಯಕ್ರಮಗಳೇನಿವೆ ಎಂಬ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು. ಇವತ್ತು ಗೊಬ್ಬರ ಅತ್ಯಂತ ಅಗತ್ಯವಾದಂತಹ ಇನ್‌ಪುಟ್ ಅದರಲ್ಲೂ ಏನೇ ಬೆಳೆಯಬೇಕಾದರೂ ರಾಸಾಯನಿಕ ಗೊಬ್ಬರ ಬಹಳ ಪ್ರಾಮುಖ್ಯವಾದುದು. ನಾನು ನಮ್ಮ ಉತ್ತರ ಭಾಗದ ಅದರಲ್ಲೂ ವಿಶೇಷವಾಗಿ ನೆರೆ ರಾಜ್ಯಗಳಿಗೆ ಹೊಂದಿಕೊಂಡಿರುವ ಬೆಳಗಾಂ, ಧಾರವಾಡ, ಬಿಜಾಪುರ ಅಥವಾ ಕಾರವಾರ ಜಿಲ್ಲೆಗಳೇನಿವೆ, ಅಲ್ಲಿ ಬಹುತೇಕ ಬೆಳೆಗಳಿಗೆ ಹೊರ ರಾಜ್ಯಗಳಿಂದ, ಅದರಲ್ಲೂ ವಿಶೇಷವಾಗಿ ಮಹಾರಾಷ್ಟ್ರದ ಸಾಂಗ್ಲಿಯಿಂದ ಗೊಬ್ಬರ ಬರುತ್ತದೆ. ಬಹಳ ನೋವಿನಿಂದ ಹೇಳಬೇಕಾದ ವಿಷಯವೇನೆಂದರೆ, ಆ ರೀತಿ ಬರುವಂತಹ ಗೊಬ್ಬರದಲ್ಲಿ ಕನಿಷ್ಟ 50 ಪಾಲಿನಷ್ಟು ವಿಷಪೂರಿತ ಗೊಬ್ಬರ ಬರುತ್ತದೆ. ಅದು ಯಾವುದೇ ಲೆಕ್ಕಕ್ಕೆ ಸಿಗದ ಹಾಗೆ ಒಳಗಡೆ ಬರುತ್ತದೆ. ಅದಕ್ಕೆ ಕೊಡುವಂತಹ ದುಡ್ಡೂ ಸಹಿತ ಆ ಲೆಕ್ಕದಲ್ಲೇ ಬರುತ್ತದೆ. ಅದನ್ನೇ ರೈತರಿಗೆ ಉದ್ದರಿಯಾಗಿ ಕೊಟು ಸರ್ವಸ್ವವನ್ನೂ ಹಾಳು ಮಾಡುವಂತಹ ಪರಿಸ್ಥಿತಿ ಅಲ್ಲಿ ನಡೆದಿದೆ. ಸಾಂಗ್ಲಿಗೆ ಹೋದರೆ, ನಿಮಗೆ ಯಾವ ಗೊಬ್ಬರ ಬೇಕು ಎಂದು ಕೇಳುವಂತಹ ಪರಿಸ್ಥಿತಿ ಇವತ್ತು ಇದೆ. ದಯವಿಟ್ಟು ಅದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಸರ್ಕಾರ ಇದನ್ನು ನಿಲ್ಲಿಸುತ್ತದೆಯೋ ಹೇಗೆ ಎಂಬುದನ್ನು ಮಾನ್ಯ ಕೃಷಿ ಸಚಿವರು ಹೇಳಬೇಕಾಗಿ ಕೋರುತ್ತೇನೆ.

ಶ್ರೀ ಶಿವಾನಂದ ಪಾಟೀಲ್ (ತಿಕೋಟಾ) : ಮಾನ್ಯ ಅಧ್ಯಕ್ಷರೇ, ಬೆಳೆ ವಿಮಾ ಯೋಜನೆಯನ್ನು ಸರ್ಕಾರದವರು ಈಗ ಬಿಜಾಪುರದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದಿದ್ದಾರೆ. ಈ ಬಗ್ಗೆ ನಾನು ಕಳೆದ ಬಾರಿ ಕೂಡ ಒಂದು ಮಾತನ್ನು ಮಾನ್ಯ ಸಚಿವರ ತಿಳುವಳಿಕೆಗೆ ತಂದಿದ್ದೆ. ಅಲ್ಲಿ ಸಣ್ಣ ಮತ್ತು ಮಧ್ಯಮ ರೈತರು ಒಟ್ಟು 1 ಲಕ್ಷ 10 ಸಾವಿರ ಜನರಿದ್ದಾರೆ. ಅವರಲ್ಲಿ ಕೇವಲ 60 ಸಾವಿರ ಜನ ರೈತರು ಮಾತ್ರ ಡಿಕ್ಲರೇಷನ್ ಫಾರ್ಮ್ ಫೈಲ್ ಮಾಡಿ ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಇನ್ನೂ 45 ಸಾವಿರ ಜನ ರೈತರಿದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ

ಬರೆದು ಅವರಿಗೂ ಒಂದು ಅವಕಾಶ ಕೊಟ್ಟು, ಡಿಕ್ಲರೇಷನ್ ಫೈಲ್ ಮಾಡಿ, ಅವರಿಗೆ ಬೆನಿಫಿಟ್ ಕೊಡಬೇಕಾದಂತಹ ವ್ಯವಸ್ಥೆ ಏನಾದರೂ ಮಾಡಿದ್ದೀರಾ? ಈ ಯೋಜನೆ ಬೆನಿಫಿಟ್ ಅರ್ಧದಷ್ಟು ಜನರಿಗೆ ಸಿಕ್ಕಿಲ್ಲ. ಅಲ್ಲಿ ಕೇವಲ ಸಣ್ಣ ಮತ್ತು ಮಧ್ಯಮ ರೈತರು ಮಾತ್ರವಲ್ಲ ಎಲ್ಲರಿಗೂ ಈ ಯೋಜನೆಯ ಪ್ರಯೋಜನ ನೀಡಬೇಕಾಗಿದೆ. ನಾವು ಇದರ ಬಗ್ಗೆ ವಿಷಯ ಸಮಿತಿಯಿಂದಲೂ ಕೂಡ ಶಿಫಾರಸ್ಸು ಮಾಡಿದ್ದೆವು. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲೂ ಸಹಾ ಇದೇ ತರಹದ ಜನರಲ್ ಡಿಮ್ಯಾಂಡ್ ಇದೆ. ಅದರ ಬಗ್ಗೆ ಏನಾದರೂ ಸರ್ಕಾರ ವಿಚಾರ ಮಾಡುತ್ತದೆಯೇ? ಇದಲ್ಲದೆ ವಿಷಯ ಸಮಿತಿಯಿಂದ ನಾವು ಮತ್ತೊಂದು ಶಿಫಾರಸ್ಸು ಮಾಡಿದ್ದೆವು. ಈಗ ಹಾಲಿ ಸಾಯಿಲ್ ಟೆಸ್ಟಿಂಗ್ ಮತ್ತು ವಾಟರ್ ಟೆಸ್ಟಿಂಗ್‌ಗಾಗಿ ಇರುವ ಅಗ್ರಿಕಲ್ಚರ್ ಹಾಗೂ ಹಾರ್ಟಿಕಲ್ಚರ್ ಲ್ಯಾಬ್‌ಗಳೆರಡನ್ನೂ ಸೇರಿಸಿ ಹೊಸ ರೀತಿಯ ಅನ್ಯಾಲಿಸಿಸ್‌ಗಳನ್ನು ಆ ಲ್ಯಾಬ್‌ನಲ್ಲಿ ಮಾಡಲು ಜಿಲ್ಲಾ ಮಟ್ಟದಲ್ಲಿ ವ್ಯವಸ್ಥೆ ಮಾಡಬೇಕು. ಹೊಸ ಹೊಸ ರೀತಿಯ ಅನ್ಯಾಲಿಸಿಸ್‌ಗಳೇನು ಇವತ್ತು ಬಂದಿವೆ, ಅವುಗಳು ಒಂದೂ ಕೂಡ ಇವತ್ತು ಸಿಗುವುದಿಲ್ಲ, ಈ ಅನ್ಯಾಲಿಸ್‌ಗಳಲ್ಲಿ ಜಿಂಕ್, ಫೆರಸ್, ಮ್ಯಾಗ್ನೇಷಿಯಂ, ಐರನ್, ಬೋರಾನ್ ಇವೆಲ್ಲಾ ಅಂಶಗಳ ಬಗ್ಗೆ ಟೆಸ್ಟ್ ಮಾಡಬೇಕಾಗುತ್ತದೆ. ಅಂತಹವುದರ ಬಗ್ಗೆ ರೆಕ್ಮಂಡೇಷನ್ ಮಾಡಲಿಕ್ಕೆ, ಹಾರ್ಟಿಕಲ್ಚರ್ ಹಾಗೂ ಅಗ್ರಿಕಲ್ಚರ್ ಇಲಾಖೆಗಳು ಎರಡೂ ಕೂಡ ಕಂಬೈನ್ ಆಗಿ ಕನಿಷ್ಟ ಜಿಲ್ಲಾ ಮಟ್ಟದಲ್ಲಿ ಒಂದು ಲ್ಯಾಬ್ ಅನ್ನು ಮಾಡತಕ್ಕಂಥ ವ್ಯವಸ್ಥೆ ಏನಾದರೂ ಮಾನ್ಯ ಸಚಿವರು ಮಾಡುತ್ತಾರೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ಈ ಭೂ ಸಾರ ಸಂರಕ್ಷಣೆ ಬಗ್ಗೆ ಮಾನ್ಯ ಸಚಿವರು ಮಾತನಾಡುತ್ತಾ ಆಗಲೇ ಹೇಳಿದರು. ಭೂ ಸಾರ ಸಂರಕ್ಷಣೆಗೆ ಸರ್ಕಾರದವರು ಕೋಟ್ಯಾಂತರ ರೂ.ಗಳನ್ನು ವೆಚ್ಚ ಮಾಡುತ್ತಿದ್ದಾರೆ. ಇದರಲ್ಲಿ ತಾಂತ್ರಿಕ ಪರಿಣತಿಯನ್ನು ಹೊಂದದೇ ಇರತಕ್ಕ ವ್ಯಕ್ತಿಗಳು ಭೂಸಾರ ಸಂರಕ್ಷಣೆಯನ್ನು ಮಾಡುತ್ತಿದ್ದಾರೆ. ಎಲ್ಲಿ ಭೂಸಾರ ಸಂರಕ್ಷಣೆ ಮಾಡಬೇಕು, ಹೇಗೆ ಮಾಡಬೇಕು ಎಂಬ ಬಗ್ಗೆ ಅಂದಾಜು ಪಟ್ಟಿ ತಯಾರು ಮಾಡಬೇಕಾದ ಇಂಜಿನಿಯರ್‌ಗಳ ವ್ಯವಸ್ಥೆ ಇಲ್ಲದೇ ಭೂ ಸಾರದ ಹೆಸರಿನಲ್ಲಿ ಕೋಟ್ಯಾಂತರ ರೂ.ಗಳ ಹಣವನ್ನು ಕೃಷಿ ಇಲಾಖೆ ಕೊಳ್ಳೆ ಹೊಡೆಯುತ್ತಿದೆ ಎಂಬ ಆಪಾದನೆಯನ್ನು ನಾನು ಇಲ್ಲಿ ಮಾಡಿದರೆ ತಪ್ಪಾಗುವುದಿಲ್ಲ ಎಂದು ಭಾವಿಸುತ್ತೇನೆ. ಬಹುಶಃ ಹಲಗೆ ಇಲ್ಲದೇ ನೀರಿನಲ್ಲಿ ತೇಲತಕ್ಕಂತಹ ವ್ಯವಸ್ಥೆ ಅಡಿಯಲ್ಲಿ ನಾವಿದ್ದೇವೆ. ಒಂದು ಕಿಂಡಿ ಅಣೆಕಟ್ಟು ಕಟ್ಟಿದರೆ ಅದಕ್ಕೆ ಹಲಗೆ ಹಾಕುವುದಿಲ್ಲ. ಹಲಗೆ ಹಾಕತಕ್ಕಂತಹ ವ್ಯವಸ್ಥೆ ಇಲ್ಲ. ನಿಮ್ಮಲ್ಲಿರತಕ್ಕಂತಹ ಒಟ್ಟು ವ್ಯವಸ್ಥೆ ಏನೆಂದರೆ 50,000 ರೂಪಾಯಿಗೆ ಒಂದು ಕಿಂಡಿ ಅಣೆಕಟ್ಟು ಕಟ್ಟುತ್ತಿದ್ದೀರಿ. ಆ ಕಿಂಡಿಯಲ್ಲಿ ನೀರು ನಿಲ್ಲಬೇಕು ಎನ್ನತಕ್ಕಂಥದ್ದು ಕೃಷಿ ಇಲಾಖೆಯ ಯೋಜನೆ. ಅದನ್ನು ಮಾಡತಕ್ಕಂತಹವರು ಗ್ರಾಮ ಸೇವಕರು. ಅದರಲ್ಲಿ ಯಾವುದೇ ತಾಂತ್ರಿಕ ತರಬೇತಿ ಹೊಂದದೆ ಇರತಕ್ಕಂತಹ ಇಂಜಿನಿಯರ್ ಅದಕ್ಕೆ ಒಂದು ಯೋಜನೆ ತಯಾರು ಮಾಡುತ್ತಾರೆ. ಅವರಿಗೆ ಎಲ್ಲಿ ಈ ಯೋಜನೆ ಕಾರ್ಯಕ್ರಮವನ್ನು ರೂಪಿಸಬೇಕು ಎನ್ನತಕ್ಕಂಥದ್ದು ಅವರ ವ್ಯಾಪ್ತಿಗೆ ಬಿಟ್ಟಿದ್ದು. ಎಲ್ಲಿ ನೀರು ಶೇಖರಣೆ ಆಗಬೇಕು? ಎಲ್ಲಿ ಉಪಯೋಗ ಸಮರ್ಪಕವಾಗಿ ಆಗಬೇಕು? ಎಲ್ಲಿ ಕಟ್ಟಡ ಕಟ್ಟಬೇಕು ಎಲ್ಲಿ ತಡೆ ಗೋಡೆ ಕಟ್ಟಬೇಕು ಎಂದು ನಿರ್ಧಾರ ಮಾಡುವವರು ಗ್ರಾಮ

ಸೇವಕರು. ಈ ವ್ಯವಸ್ಥೆ ಅಡಿಯಲ್ಲಿ ನಾವು ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಈಗಾಗಲೇ ರೈತರ ಕೀಟನಾಶಕ ಮತ್ತು ಕಳಪೆ ಬೀಜಗಳ ಬಗ್ಗೆ, ಕಳಪೆ ಬೀಜ ಎನ್ನತಕ್ಕಂಥದ್ದು ನಮ್ಮ ಕೃಷಿ ಇಲಾಖೆಯ ಒಂದು ವ್ಯವಹಾರ ಕೇಂದ್ರ. ಅದು ಬೀಜ ಮೊಳಕೆ ಬರುವುದಿಲ್ಲ ಎಂದು ಗೊತ್ತಾಗುವುದಿಲ್ಲ, ಬೀಜ ಹಾಕಿದ ಮೇಲೆ ಗೊತ್ತಾಗುತ್ತದೆ. ನೀವು ಅಲ್ಲಿ ಹೇಗೆ ಸರ್ಟಿಫೈ ಮಾಡುತ್ತೀರಿ, ನೀವು ಸರ್ಟಿಫೈ ಮಾಡಿದ ಕೂಡಲೇ ಬೀಜ ಬಿತ್ತನೆ ಆಗುತ್ತಾ, ಮೊಳಕೆ ಬರುತ್ತಾ ಎನ್ನತಕ್ಕಂತಹ ಪ್ರಶ್ನೆ ನಾನು ಮೊನ್ನೆ ಜೆಡಿಪಿ ಸಭೆಯಲ್ಲಿ ಕೇಳಿದ್ದೆ. ಅವರೇ ಸರ್ಟಿಫೈ ಮಾಡಿ ಕೊಟ್ಟಿದ್ದಾರೆ. ರೈತರು ದೂರು ಕೊಡುವುದು ತಡವಾಯಿತು, ಇಂತಹ ಒಂದು ವ್ಯವಸ್ಥೆ ಅಡಿಯಲ್ಲಿ ನಾವು ಇದ್ದೇವೆ. ಈ ಕಳಪೆ ಬೀಜಗಳ ಬಗ್ಗೆ ವಿಶೇಷವಾಗಿ ತಾವು ಗಮನಿಸಬೇಕಾಗುತ್ತದೆ. ಈ ಅವ್ಯವಹಾರ ಇದ್ದರೆ ಅದರಲ್ಲಿ ನೇರವಾದ ಜವಾಬ್ದಾರಿಯನ್ನು ತಮ್ಮ ಇಲಾಖೆ ಹೊರ ಬೇಕಾಗುತ್ತದೆ. ಈ ರಾಜ್ಯದಲ್ಲಿ ಬಹಳಷ್ಟು ಕಳಪೆ ಕೀಟನಾಶಕಗಳು ವಿತರಣೆಯಾಗುತ್ತಿವೆಂದು ಅವರು ಒಪ್ಪಿಕೊಂಡು. ಈ ಕಳಪೆ ಕೀಟನಾಶಕಗಳು ಕರ್ನಾಟಕದಿಂದ ಹೊರಗೆ ಹೋಗುತ್ತವೆ, ಹಾಗೆಯೇ ಬೇರೆ ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ಬರುತ್ತವೆ. ಇದನ್ನು ತಡೆಗಟ್ಟುವುದಕ್ಕೆ ಉಳಿದಿರತಕ್ಕಂತಹ ವ್ಯವಸ್ಥೆ ಏನು, ಪ್ರಯೋಗಾಲಯಗಳು ಎಷ್ಟು ಇವೆ, ಆ ಕಳಪೆ ಕೀಟನಾಶಕಗಳನ್ನು ತಡೆಗಟ್ಟತಕ್ಕಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೀರಾ? ಈಗಾಗಲೇ ನಮ್ಮ ಸ್ನೇಹಿತರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಈ ಪಟ್ಟಿಯನ್ನು ಹೇಳಿದರು. ನನ್ನ ನೇರವಾದ ಆಪಾದನೆ, ಈ ಕಳಪೆ ಕೀಟ ನಾಶಕಗಳ ತಯಾರಿಕೆ ಹಿಂದೆ ತಮ್ಮ ಇಲಾಖೆ ಸಂಪೂರ್ಣವಾಗಿ ಅಪ್ರಯೋಜಕವಾಗಿದೆ. ಬೇಕಾದರ ತಮಗೆ ಪ್ರಾಮಾಣಿಕವಾಗಿ ತನಿಖೆ ಮಾಡುವ ಇಚ್ಛೆ ಇದ್ದರೆ 15 ವರ್ಷಗಳ ಅಂಕಿ ಸಂಖ್ಯೆಗಳನ್ನೂ ತೆಗೆದುಕೊಳ್ಳಿ. ಬ್ಯಾನ್ ಆಗಿರತಕ್ಕಂತಹ ಕಂಪನಿಗಳ ತನಿಖೆ ಮಾಡದೆ ರಿವೋಕ್ ಆಗಿರತಕ್ಕಂತಹ ಪ್ರಕರಣಗಳನ್ನು ನಾವು ಕಂಡಿದ್ದೇವೆ. ಯಾವುದೇ ಸರ್ಕಾರ ಇರಲಿ, ಈ ಇಲಾಖೆಯ ಒಂದು ಬೇಜಾವಾಬ್ದಾರಿತನದಿಂದ ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನೀವು ನೋಡುತ್ತೀರಿ, ಇಲಾಖೆಯ ಅಧಿಕಾರಿಗಳ ಮೇಲೆ ಏಕೆ ಕೇಸ್ ಬುಕ್ ಮಾಡುವುದಿಲ್ಲ, ಅವರಿಗೆ ಏನು ಜವಾಬ್ದಾರಿ ಇದೆ, ಯಾರೋ ಉತ್ಪಾದನೆ ಮಾಡುವವರು ಲಾಭಕ್ಕಾಗಿ ಉತ್ಪಾದನೆ ಮಾಡಬಹುದು. ಅದನ್ನು ರಕ್ಷಣೆ ಮಾಡುವ ಅಧಿಕಾರಿಗಳ ಮೇಲೆ ತಮ್ಮ ಹತೋಟಿ ಇಲ್ಲವೇ; ತಾವು ಹೇಳುತ್ತೀರಿ, ಏನೂ ಕಾನೂನು ಇಲ್ಲ, ಕಾನೂನು ಇಲ್ಲದೆ ಇರತಕ್ಕಂತಹ ಅಧಿಕಾರಿಗಳಿಂದ ಏಕೆ ಪರೀಕ್ಷೆ ಮಾಡಿಸುತ್ತೀರಿ? ನೀವು ಒಪ್ಪಲೇ ಬೇಕಾಗುತ್ತದೆ. ಏಕೆಂದರೆ ಬಾಂಬೆಯಲ್ಲಿ ಒಬ್ಬ ರೌಡಿ ಆಸ್ಪತ್ರೆಯಲ್ಲಿ ಇದ್ದಂತಹ ಸಂದರ್ಭದಲ್ಲಿ ಅವನು ತಪ್ಪಿಸಿಕೊಂಡು ಹೋಗುತ್ತಾನೆ. ಅವನ್ನು ಬಂಧನ ಮಾಡದೆ ಇರತಕ್ಕಂತಹ ಪ್ರಕರಣಗಳನ್ನು ನಾವು ಪೇಪರಿನಲ್ಲಿ ಓದುತ್ತೇವೆ. ಹಾಗ ಕಳಪೆ ಕೀಟನಾಶಕಗಳಿಂದಲೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅಂತಹ ಕಡೆ ಕೃಷಿ ಇಲಾಖೆಯ ಅಧಿಕಾರಿಗಳನ್ನು ನೇರವಾಗಿ ಜವಾಬ್ದಾರಿ ಮಾಡಿದರೆ, ಇದರ ಬಗ್ಗೆ ಪರೀಕ್ಷೆ ಮಾಡತಕ್ಕಂತಹ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳುತ್ತಾರೆ. ಫಲಾನುಭವಿಗಳಿಗೆ ಕೊಡತಕ್ಕಂತಹ ಸೌಲಭ್ಯಗಳ ಕಡೆ ಬಗ್ಗೆ ಅದೂ ಸಹ ಅಂಕಿ ಸಂಖ್ಯೆ ಇಲ್ಲ. ಅಂಕಿ ಸಂಖ್ಯೆ ತಮಗೆ ಗೊತ್ತಿದೆ. ತಮ್ಮ

ಪ್ರಾಮಾಣಿಕತೆ ಪ್ರಶ್ನೆ ಮಾಡುವುದಿಲ್ಲ. ತಾವು ಐದು ಗಂಟೆ ಭಾಷಣ ಮಾಡಿದರೂ ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲ. ಬಹಳಷ್ಟು ಮುಂಚೆ ಮಾಡಿರಬಹುದು ಈಗಲೂ ಮಾಡಬಹುದು, ನೀವು ಇಷ್ಟು ಹೋರಾಟದಲಿ ಮಧ್ಯೆ ನನ್ನ ಕ್ಷೇತ್ರದಲ್ಲಿ ವೆಂಟೆಡ್ ಡ್ಯಾಮ್ ಆಗದೇ ಬಿಲ್ಲು ಪಡೆದಿದ್ದನ್ನು ತಾವು ನೋಡಿದ್ದೀರಿ. ಕೇಸ್ ಬುಕ್ ಮಾಡಿಸುವುದಕ್ಕೆ ಇಲಾಖೆಗೆ ಬಂದಿದ್ದೇವೆ, ಒಬ್ಬ ಕ್ಯಾಬಿನೆಟ್ ದರ್ಜೆ ಸಚಿವರಾಗಿದ್ದುಕೊಂಡು ಕೆಲಸ ಆಗದೆ ಬಿಲ್ಲ್ ಪಡೆದ ಸಂದರ್ಭದಲ್ಲಿ ಅವನ ಮೇಲೆ ಕೇಸ್ ದಾಖಲು ಮಾಡುವುದಕ್ಕೆ ಆಗದೆ ಇರುವ ಪರಿಸ್ಥಿತಿ ಹಿನ್ನೆಲೆಯಲ್ಲಿ ನಾವು ಇದ್ದೇವೆ. ಇಲ್ಲಿ ನಾವು ಎಷ್ಟರ ಮಟ್ಟಿಗೆ ನಿರೀಕ್ಷೆ ಮಾಡಬಹುದು, ಎಷ್ಟು ರೈತರು ನಿರೀಕ್ಷೆ ಮಾಡಬಹುದು, ಎಷ್ಟು ನ್ಯಾಯವನ್ನು, ಎಷ್ಟು ಅದರ ಪ್ರಯೋಜನವನ್ನು ರೈತರು ಪಡೆಯಬಹುದು; ನಿಮ್ಮ ಕಾಳಜಿಯನ್ನು ನಾವು ಪ್ರಶ್ನಿಸುತ್ತಿಲ್ಲ, ನಿಮ್ಮ ಪ್ರಾಮಾಣಿಕತೆಯನ್ನು ನಾವು ಪ್ರಶ್ನಿಸುತ್ತಿಲ್ಲ. ಆದರೆ ತಮ್ಮ ಸಾಧನೆ ಮತ್ತು ನಮ್ಮ ನಾಯಕರು ಹೇಳಿದ ಹಾಗೆ ಭಾಷಣಕ್ಕೆ ಮಾತ್ರ ಸೀಮಿತವಾಗುತ್ತದೆ. ಅನ್ನುವ ಭೀತಿ ನನ್ನಲ್ಲಿ ಇದೆ ಮತ್ತು ನೀವು ಏನೇ ಸೌಲಭ್ಯಗಳನ್ನು ಕೊಟ್ಟರೂ ಗ್ರಾಮ ಪಂಚಾಯಿತಿ ನಿರ್ಣಯದ ಮುಖಾಂತರ ಕೊಡಿ. ಅಥವಾ ತಾಲ್ಲೂಕು ಪಂಚಾಯಿತಿ ನಿರ್ಣಯದ ಮುಖಾಂತರ ಕೊಡಿ. ಅವರ ಸಂಪೂರ್ಣ ವಿಳಾಸ ಇರುತ್ತದೆ. ಆಗ ಸಿಗಬೇಕಾದ ಜನರಿಗೆ ನೇರವಾಗಿ ಸಿಗುತ್ತದೆ. ಅಧಿಕಾರಿಗಳು ತಮ್ಮದೇ ಆದ ವ್ಯವಹಾರ ಮಾಡುವುದಕ್ಕಾಗುವುದಿಲ್ಲ. ಇದು ನಾವು ಅಧಿಕಾರ ವಿಕೇಂದ್ರೀಕರಣದ ಅಡಿಯಲ್ಲಿದ್ದೇವೆ. ಏನಾದರೂ ಸೌಲಭ್ಯಗಳು ಕೊಡಬೇಕಾದರೆ ಆ ಸೌಲಭ್ಯಗಳನ್ನು ಆಯಾ ಪ್ರದೇಶದಲ್ಲಿ ವ್ಯವಸ್ಥೆ ಅಡಿಯಲ್ಲಿ ಅವರ ನಿರ್ಣಯದ ಮುಖಾಂತರ ಕೊಟ್ಟರೆ ಅವರ ವಿಳಾಸ ಇರುತ್ತದೆ. ಕೊಡತಕ್ಕಂತಹ ಸೌಲಭ್ಯಗಳು ಇರುತ್ತವೆ. ಯಾರು ಫಲಾನುಭವಿಗಳು ಇರುತ್ತಾರೆ. ಯಾವುದೇ ಸಂದರ್ಭದಲ್ಲಿ ಪಾರದರ್ಶಕ ತನಿಖೆ ಮಾಡತಕ್ಕಂಥದ್ದು ಆಗುತ್ತದೆ. ಎನ್ನತಕ್ಕಂತಹ ಮಾತನ್ನು ಹೇಳಿ, ತಾವು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಮತ್ತು ಕೀಟನಾಶಕ ಮತ್ತು ಕಳಪೆ ಬೀಜಗಳನ್ನು ಯಾರು ಉತ್ಪಾದನೆ ಮಾಡುತ್ತಾರೆ ಅದನ್ನು ಪತ್ರಿಕೆಗಳಿಗೆ ಕೊಡಬೇಕು. ಆ ಉತ್ಪನ್ನಗಳನ್ನು, ಅಂತಹ ಪ್ರಾಡಕ್ಟ್‌ಗಳನ್ನು ಜನ ಖರೀದಿ ಮಾಡದೇ ಇರತಕ್ಕಂತಹ ಪರಿಸ್ಥಿತಿ ನಿರ್ಮಾಣವಾದರೆ ಸಂಪೂರ್ಣವಾಗಿ ಇಂತಹ ಕಳಪೆ ಕೀಟನಾಶಕ ಮತ್ತು ಕಳಪೆ ಬೀಜ ಉತ್ಪಾದನೆ ಆಗುವುದಿಲ್ಲ ಎನ್ನುವ ವಾದವನ್ನು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಈ ಹಣ ಇಲಾಖೆಗೆ ಕಡಿಮೆಯಾಗುತ್ತಿದೆ, ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಅವರು 1997-98ನೇ ಸಾಲಿನಲ್ಲಿ ಇಲಾಖೆಯಲ್ಲಿ ಹಣ ಏಕೆ ಕಡಿಮೆ ಆಯಿತು ಎನ್ನುವುದಕ್ಕೆ ಕಾರಣ ಇದೆ. ಸರ್ಕಾರದ ತೀರ್ಮಾನದಂತೆ ಪ್ರತಿ ಇಲಾಖೆಯಲ್ಲಿಯೂ ಕೂಡ ಸ್ಪೆಷಲ್ ಕಾಂಪೋನೆಂಟ್ ಕಾರ್ಯಕ್ರಮಕ್ಕೋಸ್ಕರ ಇಷ್ಟು ಇಡಬೇಕೆಂದು ಇದೆ. ಅದನ್ನು ಮೊದಲು ಚೆಲ್ಲಾಪಿಲ್ಲಿಯಾಗಿ ಬೇರೆ ಬೇರೆ ಇಲಾಖೆಗಳೆಲ್ಲಾ ಖರ್ಚು ಮಾಡುತ್ತಿದ್ದರು. ತಮಗೆ ಇಷ್ಟ ಬಂದ ರೀತಿಯಲ್ಲಿ ಖರ್ಚು ಮಾಡುತಿದ್ದರು. ಇವೆಲ್ಲವನ್ನೂ ಕ್ರೋಢಿಕರಿಸಿ ಕೆಲವು ಯೋಜನೆಗಳಿಗೆ ಮಾತ್ರ ಆ ಹಣವನ್ನು ಖರ್ಚು ಮಾಡಬೇಕು ಎನ್ನತಕ್ಕಂತಹ ತೀರ್ಮಾನದ ಆಧಾರದ ಮೇಲೆ 1997-98ನೇ ಸಾಲಿನಲ್ಲಿ

ಈ ಇಲಾಖೆಯಿಂದ ಹತ್ತೂವರೆ ಕೋಟಿ ರೂಪಾಯಿಗಳಷ್ಟು ಹಣ ಪೋಲ್ ಮಾಡುವುದಕ್ಕೆ ತೆಗೆದುಕೊಂಡಿದ್ದರಿಂದ ಹಣ ಕಡಿಮೆಯಾಗಿದೆ. ಆದರೆ ಅದು ಆ ಇಲಾಖೆಯಲ್ಲಿ ಖರ್ಚಾಗಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಎಸ್‌ಸಿಪಿ ಮತು ಟಿಎಸ್‌ಪಿಯಲ್ಲಿ ಈ ಹಣ ಪೂಲ್ ಆಗಿರುವುದರಿಂದ ಈ ಹಣ ಕಡಿಮೆಯಾಗಿದೆ. ಅವರು ಹೇಳಿದ ಮಾತನ್ನು ನಾನು ತಕರಾರು ಮಾಡುವುದಕ್ಕಾಗುವುದಿಲ್ಲ. ಅವಶ್ಯಕತೆ ಬೇಕಾದಷ್ಟು ಇದೆ. ಇಷ್ಟೇ ಅಲ್ಲ ಇಡೀ ರಾಜ್ಯದ ಬಡ್ಜೆಟ್‌ನಲ್ಲಿ ಇರತಕ್ಕಂತಹ ಹಣ ಎಲ್ಲಾ ಕೃಷಿ ಇಲಾಖೆ ಒಂದಕ್ಕೇ ಕೊಟ್ಟರೂ ಕೂಡ ಸಾಕಾಗುವುದಿಲ್ಲ. ಆದರೆ ಇಂತಹ ಪರಿಸ್ಥಿತಿ ಇವತ್ತಿನ ದಿವಸ ಇಲ್ಲ. ಬರತಕ್ಕಂತಹ ಹಣದಲ್ಲಿ ಎಷ್ಟು ಹಣ ಬರುತ್ತದೆ, ಯಾವ ಯಾವ ಇಲಾಖೆಗೆ ಎಷ್ಟೆ ಹಣ ಖರ್ಚಾಗಿದೆ ಅದನ್ನು ನೋಡಿ ನಾವು ಹಣ ಖರ್ಚು ಮಾಡಬೇಕಾಗುತ್ತದೆ, ಅನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತಾ ಮಾನ್ಯ ಈಶ್ವರಪ್ಪನವರು ಕೀಟನಾಶಕಗಳ ಬಗ್ಗೆ ಮಾತನಾಡಿದ್ದಾರೆ ನಾನು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ರಾಜ್ಯದ ಚಿತ್ರ ಏನಾಗಿದೆ ಮತ್ತು ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯ ಚಿತ್ರ ಏನಾಗಿದೆ ಅನ್ನುವುದನ್ನು ಕೊಟ್ಟಿದ್ದೇನೆ. ಯಾರಾದರೂ ಸದಸ್ಯರು ಇಲ್ಲಿ ಮಾತನಾಡುವಾಗ ಎಲ್ಲರೂ ಜವಾಬ್ದಾರಿಯುತವಾಗಿ ಮಾತನಾಡಬೇಕಾಗುತ್ತದೆ. ಕಾನೂನು ಕಟ್ಟಲೆ ಇಲ್ಲದೆ ಯಾರಿಗಾದರೂ ಗಲ್ಲಿಗೆ ಹಾಕಬಹುದು, ಇಲ್ಲ ಬಂದೂಕಿನಿಂದ ಅವರಿಗೆ ಸುಡಬಹುದು ಎಂದು ಏನಾದರೂ ಇದ್ದರೆ ತೋರಿಸಿ ಕೊಡಿ ನೋಡೋಣ. ಏನು ಮಾಡಬೇಕಾಗಿದ್ದರೂ ಕಾನೂನು ಮೀರಿ ಮಾಡುವುಕ್ಕಾಗುವುದಿಲ್ಲ. ಕಾನೂನು ರೀತಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ಚಾಚೂ ತಪ್ಪದೆ ನಾವು ತೆಗೆದುಕೊಳ್ಳುತೇವೆ. ನಾನು ಅನೇಕ ಸಾರಿ ಹೇಳಿದ್ದೇನೆ, ಅಲ್ಲಿ ಇಲ್ಲಿ ಲೋಪದೋಷಗಳಿವೆ, ಇಲ್ಲವೆಂದು ನಾನು ಹೇಳುತ್ತಿಲ್ಲ. ಏನು ಎಲ್ಲಾ ಸರ್ಕಾರಿ ನೌಕರರು ಹರಿಶ್ಚಂದ್ರರೇನು; ಈ ದೇಶದಲ್ಲಿರುವ 95 ಅಥವಾ 97 ಕೋಟಿ ಜನರೆಲ್ಲಾ ಹರಿಶ್ಚಂದ್ರರಾಗಿದ್ದಾರೇನು? ಇವತ್ತು ಕಳ್ಳತನ ಮಾಡಬಾರದೆಂದು ಕಾನೂನು ಇದೆ. ಹಾಗಾದರೆ ಕಳ್ಳತನ ನಿಂತಿದೆಯೇನು?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಈ ರೀತಿಯ ಕಳ್ಳತನದಿಂದ ಇಡೀ ರಾಜ್ಯ, ದೇಶದ ಮೇಲೆ ಅಪಾಯವಾಗುವಂಥದ್ದು;

ಶ್ರೀ ಸಿ. ಬೈರೇಗೌಡ : ಈಗ ತಪ್ಪು ಮಾಡಿರುವ ಎಷ್ಟು ಜನರಿಗೆ ಶಿಕ್ಷೆ ವಿಧಿಸಿದ್ದೇವೆ, ಏನು ಮಾಡಿದ್ದೇವೆನ್ನುವ ಅಂಕಿಅಂಶಗಳನ್ನೆಲ್ಲಾ ಕೊಟ್ಟಿದ್ದೇವೆ. ಯಾರ ಕಾಲದಲ್ಲಿ ಈ ಕೆಲಸವೆಲ್ಲಾ ಆಗಿದೆ ಎನ್ನುವುದನ್ನು ಪ್ರತಾಪಚಂದ್ರಶೆಟ್ಟಿಯವರೇ ಹೋಗಿ ನೋಡಿಕೊಂಡು ಬನ್ನಿ; ಹಿಂದೆ ಕೇಳುವವರು ಇದ್ದರೆ? ಭೂಸಾರ ಸಂರಕ್ಷಣೆಯಲ್ಲಿ ಸುಮಾರು 600 ಕೋಟಿ ರೂ.ಗಳ ಕೆಲಸಗಳಾಗಿವೆ; ಯಾರ್‍ಯಾರ ಕಾಲದಲ್ಲಿ ಎಷ್ಟೆಷ್ಟು ಕೆಲಸಗಳಾಗಿದ್ದಾವೆನ್ನುವ ಲೆಕ್ಕ ಬೇಕಾದರೆ ನಾನು ಕೊಡುವುದಕ್ಕೆ ಸಿದ್ದನಿದ್ದೇನೆ. ಇವತ್ತು ನಾವು ಬಂದ ಮೇಲೆ ಅದಕ್ಕೆ ಅವಕಾಶವಿಲ್ಲದಂಥ ರೀತಿಯಲ್ಲಿ ಎಲ್ಲೆಲ್ಲಿ ಏನೇನು ಆಗುತ್ತಿತ್ತು ಅದನ್ನು ತಡೆಗಟ್ಟತಕ್ಕಂಥ ರೀತಿಯ ಎಲ್ಲಾ ಸರ್ವಪ್ರಯತ್ನವನ್ನೂ ಕೂಡ ನಡೆಸಿದ್ದೇವೆ, ಅದರಲ್ಲಿ ನಾವು ಪೂರ್ಣ ಯಶಸ್ವಿಯಾಗಿದ್ದೇವೆಂದು ಹೇಳುವುದಿಲ್ಲ, ಆದರೆ ಅದರಲ್ಲಿ ಬಹುಮಟ್ಟಿನ ಯಶಸ್ಸನ್ನು.

ಸಾಧಿಸಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಚ್ಛಿಪಡುತ್ತೇನೆ. ಇನ್ನು ವಾಟಾಳ್ ನಾಗರಾಜ್‌ರವರು ಹಾಗೂ ಈಶ್ವರಪ್ಪನವರು ಸದನ ಸಮಿತಿ ಒಪ್ಪಲಿಲ್ಲವೆಂದು ಹೇಳಿದ್ದಾರೆ, ಅದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ. ಇದೆ ಸದನದಲ್ಲಿ ಚರ್ಚೆಯಾಗಿದೆ, ಮಾನ್ಯ ವಿರೋಧಪಕ್ಷದ ನಾಯಕರೂ ಸಹ ನಾವೇನೋ ರೈತರಿಗೆ ಕೊಡುತ್ತಾರೆಂದು ನಿರೀಕ್ಷೆ ಮಾಡಿದ್ದೆವು ಎನ್ನುವುದನ್ನು ಹೇಳಿದ್ದಾರೆ. ನಾನು ಇದುವರೆಗೆ ಮಾತನಾಡಿರುವುದು, ಇಲಾಖೆ ಇರುವುದು ರೈತರಿಗೋಸ್ಕರ, ಇಲಾಖೆ ರೈತರಿಗೆ ಬಿಟ್ಟು ಯಾರಿಗೂ ಇಲ್ಲ, ರೈತರದ್ದೇ ಆಗಿರುವ ಇಲಾಖೆ, ರೈತರಿಗೋಸ್ಕರವೇ ಇರುವ ಇಲಾಖೆ. ನಾವು ಏನು ಹೇಳಿದ್ದೇವೆ, ಏನು ಮಾಡಿದ್ದೇವೆ ಅದೆಲ್ಲವೂ ಕೂಡ ನೂರಕ್ಕೆ ನೂರರಷ್ಟು ರೈತರಿಗೆ ಅನುಕೂಲವಾಗುವ ಕೆಲಸಕಾರ್ಯಗಳು ಎಂದು ಹೇಳುತ್ತೇನೆ. ಇವತ್ತು ಘಾರ್ಥೇನಿಯಂ ಗಿಡ ನಾಶಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದರು, ಬಹಳ ಸಂತೋಷ. ಈಗಾಗಲೇ ಈ ವರ್ಷದಿಂದ ಈ ಪಾರ್ಥೇನಿಯಂ ಬೆಳೆ ನಾಶಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಹಾಕಿದ್ದೇವೆ. ಇದನ್ನು ನಾಶಮಾಡತಕ್ಕಂಥ ಕ್ಯಾಸಿಯಾ ಯುನಿಫ್ಲೋರಾ ಎನ್ನುವ ಒಂದು ಗಿಡವಿದೆ. ಈ ಗಿಡದ ಸುಮಾರು 80 ಕ್ವಿಂಟಲ್ ಬೀಜವನ್ನು ನಾನು ಇಡೀ ರಾಜ್ಯದಲ್ಲಿರುವ ಮುನಿಸಿಪಾಲಿಟಿಗಳು, ಕಾರ್ಪೋರೇಷನ್‌ಗಳು, ಜಿಲ್ಲಾ ಪಂಚಾಯತ್‌ಗಳ ಒಂದು ವಿಶೇಷವಾದ ಸಭೆಯನ್ನು ಕರೆದು ಮುಂದಿನ ಬಿತ್ತನೆ ಕಾಲದಲ್ಲಿ ಒದಗಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಅದು ಸುಮಾರು ಎಳೆಂಟುವರ್ಷಗಳಾದ ಮೇಲೆ ಅದು ಬೆಳೆದು ಅವೆರಡಕ್ಕೂ ಸ್ಪರ್ಧೆಯಾಗಿ, ಪಾರ್ಥೇನಿಯಂ ಗಿಡ ಏಳು, ಅಥವಾ ಹತ್ತು ವರ್ಷಗಳಾದ ಮೇಲೆ ತನ್ನಷ್ಟಕ್ಕೆ ತಾನೇ ನಾಶವಾಗುತ್ತದೆ, ಈ ಕಾರ್ಯಕ್ರಮವನ್ನೂ ಕೂಡ ನಾವು ಹಾಕಿಕೊಂಡಿದ್ದೇವೆ. ಈ ವರ್ಷ ಎಂಭತ್ತು ಕ್ವಿಂಟಾಲ್ ಇಂಥ ಬೀಜವನ್ನು ಒದಗಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದು ನಮ್ಮ ಧಾರವಾಡ ವಿಶ್ವವಿದ್ಯಾಲಯದ ಕೊಡುಗೆಯಾಗಿದೆ. ಕ್ಯಾಸಿಯ ಎನ್ನುವ ಗಿಡ ಅದಕ್ಕಿಂತ ಪ್ರಬಲವಾಗಿರುವ ಶತ್ರು. ಅದರ ಜೀವನ ಚರಿತ್ರೆಯನ್ನು ಈಗ ಹೇಳುವುದಕ್ಕಾಗುವುದಿಲ್ಲ. ವಾಟಾಳ್ ನಾಗರಾಜ್‌ರವರೇ ತಮಗೆ ಅವಶ್ಯಕತೆ ಇದ್ದರೆ ಆ ಬೀಜವನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡುತ್ತೇನೆ. ಆ ಬಗ್ಗೆ ಈ ವರ್ಷ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎನ್ನುವುದನ್ನು ಹೇಳುವುದಕ್ಕೆ ಸಂತೋಷಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರು ಕಾಂಗ್ರೆಸ್ ಎಂದೂ ಸಾಯುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾನು ಪಾರ್ಥೇನಿಯಂ ಬಗ್ಗೆ ಹೇಳಿದರೆ ಅವರು ಕಾಂಗ್ರೆಸ್ ಬಗ್ಗೆ ಹೇಳಿದರೆ ನಾನೇನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಕಾಂಗ್ರೆಸ್ ಗಿಡವೆಂದು ನಾನೇ ನಿಮಗೆ ಹೇಳಿದ್ದು, ಅದಕ್ಕೆ ಕಾಂಗ್ರೆಸ್ ಗಿಡವೆಂದು ಹೆಸರು ಬಂದುಬಿಟ್ಟಿದೆ, ಅದನ್ನು ತೆಗೆಯುವ ಕ್ಯಾಸಿಯಾ ಗಿಡದ ಹೆಸರನ್ನು ತೆಗೆದು ಬೇರೆ ಹೆಸರನ್ನು ಇಡಿ.

ಶ್ರೀ ಸಿ. ಬೈರೇಗೌಡ : ಕ್ಯಾಸಿಯ ಗಿಡ ಎನ್ನುವುದು ಕಾಂಗ್ರೆಸ್ ಗಿಡಕ್ಕೆ ಶತ್ರು, ಅದನ್ನು ಬೆಳೆಸುವ ಪ್ರಯತ್ನವನ್ನು ಕೂಡ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನೀವು ಈಗ ಕೊಡುವ ಗಿಡದಿಂದ ಬೇರೆ ಬೆಳೆಗೆ ತೊಂದರೆಯಾಗುವುದಿಲ್ಲವೂ?

ಶ್ರೀ ಸಿ. ಬೈರೇಗೌಡ : ಇದು ಅದಕ್ಕಿಂತ ಕಡಿಮೆ ಹಾರ್ಮ್‌ಫುಲ್. ಇದು ಧಾರವಾಡ ವಿಶ್ವವಿದ್ಯಾಲಯದ ಕೊಡುಗೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಎತ್ತುಗಳಿಗೆ ಲಾಳ ಹೊಡೆಯತಕ್ಕಂಥದ್ದು, ಹಳೆಯ ಕಾಲದ ನೇಗಿಲಿನ ಬಳಿಕೆ ಇದೆಲ್ಲವೂ ಕೂಡ ಇದೆ. ನಾನು ಬಹಳ ಕಾಲ ತೆಗೆದುಕೊಳ್ಳುತ್ತದೆಂದು ಇದೆಲ್ಲವನ್ನೂ ಹೇಳುವುದಕ್ಕೆ ಹೋಗಲಿಲ್ಲ, ಇದರ ಬಗ್ಗೆ ಚಿಂತನೆ ನಡೆದಿಲ್ಲ. ಮರದ ನೇಗಿಲನ್ನು ಈಗ ಯಾರೂ ಉಪಯೋಗಿಸುವುದಿಲ್ಲ ಸಾಕಷ್ಟು ಕಬ್ಬಿಣದ ನೇಗಿಲನ್ನು ಬಳಸುತ್ತಿದ್ದಾರೆ. ಆದರೆ ಲಾಳಹೊಡೆಯತಕ್ಕಂಥದ್ದು, ಎತ್ತಿನಗಾಡಿ, ಕೃಷಿಯಲ್ಲಿ ಉಪಯೋಗಿಸುವ ಸಣ್ಣ ಉಪಕರಣಗಳೇನಿವೆ ಅದರ ಬಗ್ಗೆ ಚಿಂತನೆಯಾಗಿಲ್ಲವೆನ್ನುವುದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಶ್ರೀರಾಮರೆಡ್ಡಿಯವರು ಪರಿಹಾರದ ಬಗ್ಗೆ ಹೇಳಿದ್ದಾರೆ, ಆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ನಮ್ಮ ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸಿದ್ದೇವೆ. ಕಳಪೆ ಕೀಟನಾಶದ ಬಗ್ಗೆ ಹೇಳಿದ್ದಾರೆ, ಆ ಬಗ್ಗೆ ನಾನು ಈಗಾಗಲೇ ಸಾಕಷ್ಟು ಹೇಳಿದ್ದೇನೆ, ಅದನ್ನು ಪುನರುಚ್ಚಾರ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೀದರ್‌ನಲ್ಲಿ ಅಜಿಟೇಷನ್ ನಡೆದಿದೆ. ಅದಕ್ಕೆ ತಾವು ಅಪೀಲ್ ಆದರೂ ಮಾಡಿಕೊಳ್ಳಿ. ಸದನ ಸಮಿತಿಯ ಸಂಪೂರ್ಣವಾದ ವರದಿ ಬಂದ ಮೇಲೆ ಬೇಕಾದರೆ ಪುನರ್ ಪರಿಶೀಲಿಸಿ ಮಹಾರಾಷ್ಟ್ರ, ಬೇರೆ ಕಡೆ ಸರ್ಕಾರಗಳಲ್ಲಿ ಯಾವ ರೀತಿ ಮಾಡುತ್ತಿದ್ದಾರೆ ಆ ರೀತಿ ಮಾಡುತ್ತೇವೆ ಎಂದು ಒಂದು ಆಶ್ವಾಸನೆಯನ್ನು ಕೊಟ್ಟು ಅಲ್ಲಿ ನಡೆಯುವಂತಹ ಅಜಿಟೇಷನ್ ಆದರೂ ನಿಲ್ಲಿಸಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಪುಟ್ಟಣ್ಣಯ್ಯನವರು ಸಾವಯವ ಕೃಷಿಯ ಬಗ್ಗೆ ಹೇಳಿದ್ದಾರೆ, ನಾನು ಸಾಕಷ್ಟು ಹೇಳಿದ್ದೇನೆ. ನಿಮಗೆ ಸೆಣಬೆ ಬೀಜ ಬೇರೆ ಬೇರೆ ಇತ್ಯಾದಿಗಳೇನಿದ್ದಾವೆ ಈ ರೀತಿಯ ಬೀಜಗಳನ್ನು ಒದಗಿಸತಕ್ಕಂಥ ವಿಶೇಷ ಕಾರ್ಯಕ್ರಮವನ್ನು ಹಾಕಿದ್ದೇವೆ, ಅದನ್ನು ದಯವಿಟ್ಟು ಬಳಸಿಕೊಳ್ಳಬೇಕೆನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಬೀಜಗಳನ್ನು ರಕ್ಷಣೆ ಮಾಡಬೇಕೆಂದು ಹೇಳಿದ್ದಾರೆ. ಇದಕ್ಕೆ ಜೀನ್ ಬ್ಯಾಂಕ್ ಎನ್ನುವುದಿದೆ, ಇದು ರಾಷ್ಟ್ರದ ಅನೇಕ ಕಡೆ ಇದೆ. ಆನ್‌ಬ್ಯಾಂಕ್‌ನಲ್ಲಿ ಪ್ರತಿಯೊಂದು ಬೀಜ, ಸಸಿಗಳನ್ನು ರಕ್ಷಣೆ ಮಾಡುವ ವ್ಯವಸ್ಥೆ ಇದೆ ಎನ್ನುವುದನ್ನು ಮಾನ್ಯ ಪುಟ್ಟಣ್ಣಯ್ಯನವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಮಾಧುಸ್ವಾಮಿಯವರು ಯಾವುದೋ ರಾಗಿ ಬೆಳೆ ಬಗ್ಗೆ ಹೇಳಿದರು. ಈಗ ಉತ್ತಮವಾಗಿರತಕ್ಕಂಥ ರಾಗಿ ಬಂದಿವೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜೆಪಿ-28 ಮತ್ತು 26 ಅನ್ನು ಬಿಟ್ಟಿದ್ದಾರೆ, ಇದು ರೋಗನಿರೋಧಕ ಶಕ್ತಿಯನ್ನು ಹೊಂದಿದೆ, ಇಳುವರಿ ಕೊಡುವ ರಾಗಿಯೂ ಕೂಡ ಎನ್ನುವುದನ್ನು

ಮಾಧುಸ್ವಾಮಿಯವರಿಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ಈ ಆಗ್ರೋ ಇಂಡಸ್ಟ್ರೀಸ್ ಅನ್ನು ಮನಾಪಲಿ ಮಾಡಿದ್ದೀರೆಂದು ಹೇಳಿದರು. ಹೌದು, ನಾನು ಒಪ್ಪಿದ್ದೇನೆ, ಅದು ಇಲರೇ ಬೇಕಾಗುತ್ತದೆ. ಏಕೆಂದರೆ ಆಗ್ರೋ ಇಂಡಸ್ಟ್ರೀಸ್ ಎನ್ನುವ ಒಂದು ಸಂಸ್ಥೆ ಇಲ್ಲದೇ ಹೋಗಿದ್ದರೆ ರೈತರನ್ನು ಹಾಳು ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಕಾರಣ ಎಲ್ಲೆಲ್ಲಿ ಆಗ್ರೋ ಇಂಡಸ್ಟ್ರೀಸ್ ಅಂಗಡಿಗಳಿದ್ದಾವೆ, ಉಪಕರಣಗಳಾಗಬಹುದು, ಗೊಬ್ಬರವಾಗಬಹುದು ಮನಸ್ಸಿಗೆ ಬಂದಂತೆ ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲ ಯಾರೂ ಅಲ್ಲಿಗೆ ಹೋಗುವುದಿಲ್ಲ. ಇಲ್ಲಿ ಆಗ್ರೋ ಇಂಡಸ್ಟ್ರೀಸ್ ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿರುವುದರಿಂದ ಜನರು ಇಲ್ಲಿ ಬಂದು ಕೊಂಡುಕೊಳ್ಳುತ್ತಾರೆ. ಆಗ್ರೋ ಇಂಡಸ್ಟ್ರೀಸ್‌ಗೆ ತನ್ನದೇ ಆದ ನಿಬಂಧನೆ ಇರುವ ಕಾರಣದಿಂದ ಈಗಿರುವ ವ್ಯವಸ್ಥೆಯನ್ನು ನಾವು ಮುಂದುವರೆಸಿಕೊಂಡು ಹೋಗಲೇಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಆ ಮೇಲೆ ಯಾವಗಲ್‌ರವರು ಹತ್ತಿ ಬೆಳೆಯ ಬಗ್ಗೆ ಮಾತನಾಡಿದ್ದಾರೆ, ಕಳಪೆ ಬೀಜಗಳು ಕೂಡ ಸರಬರಾಜಾಗುತ್ತಿದೆ ಎಂದು ಕೂಡ ಹೇಳಿದ್ದಾರೆ. ನಾನು ಈ ಬಗ್ಗೆ ಆಗಲೇ ಹೇಳಿದರು ಕೂಡ ಒಂದು ವಿಚಾರವನ್ನು ಹೇಳಲೇ ಬೇಕಾಗಿದೆ. ಕೆಲವು ಸದಸ್ಯರು ಕಳಪೆ ಬೀಜ, ಕಳಪೆ ಗೊಬ್ಬರ ನೀಡಲಾಗುತ್ತಿದೆ ಎಂದು ಹೇಳುತ್ತಾರೆ. ನಾನು ಖುದ್ದಾಗಿ ಕರ್ನಾಟಕ ರಾಜ್ಯದ ಕೆಲವು ಜಿಲ್ಲೆಗಳ ಹೊಲಗಳಿಗೆ ಹೋಗಿ, ವಿಜ್ಞಾನಿಗಳನ್ನು ಕರೆದುಕೊಂಡು ಹೋಗಿ, ರೈತರನ್ನು ಕರೆದು, ನೋಡಪ್ಪ ಇದು ಸರಿಯಾಗಿಲ್ಲ ಎಂದು ವಿಜ್ಞಾನಿಗಳು ವರದಿ ಕೊಟ್ಟಿದ್ದಾರೆ, ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ ಎಂದು ಇವರೆಲ್ಲರಿಗೂ ಹೇಳಿ, ರೈತರಿಗೆ ಮಾಹಿತಿಯನ್ನು ಒದಗಿಸಿ, ನೀನು ಬಳಕೆದಾರರ ವೇದಿಕೆಗೆ ದೂರು ಕೊಡು ಎಂದು ಹೇಳಿ, ಸರ್ಕಾರ ವೆಚ್ಚದಲ್ಲಿ ಆ ಅರ್ಜಿ ನಮೂನೆಯನ್ನು ಮುದ್ರಣ ಮಾಡಿಸಿ, ರುಜು ಮಾಡಿಸಿ ತೆಗೆದುಕೊಂಡು ಈ ಬಳಕೆದಾರರ ವೇದಿಕೆಯಲ್ಲಿ ದಾಖಲು ಮಾಡಿರುವ ಪ್ರಕರಣಗಳನ್ನು ಕೆಲವು ಕಡೆ ರೈತರೇ ಹೋಗಿ ವಾಪಸ್ ಪಡೆದುಕೊಂಡಿದ್ದಾರೆ; ಏನು ಮಾಡಬೇಕು ಹೇಳಿ? ನಾವು ಇನ್ನೇನು ಮಾಡಬೇಕು ಹೇಳಿ? ಆ ವಿಚಾರ ನನಗೆ ಗೊತ್ತಿರುವುದರಿಂದ ನಾನೇ ಖುದ್ದಾಗಿ ಹೋಗಿ ಎರಡು ಜಿಲ್ಲೆಗಳಿಗೆ ನಾನೇ ಹೋಗಿ ಈ ಕೆಲಸ ಮಾಡಿಸಿ ಬಂದಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ, ಇದಕ್ಕಿಂತ ಹೆಚ್ಚಿಗೆ ಏನು ಮಾಡಬೇಕೋ ಗೊತ್ತಿಲ್ಲ. ಇನ್ನೇನಾದರೂ ಇದ್ದರೆ ಅದನ್ನು ಪ್ರತಾಪಚಂದ್ರಶೆಟ್ಟಿಯವರು ಹೇಳಿದರೆ ಅದನ್ನೂ ಕೂಡ ಬೇಕಾದರೆ ಪರಿಶೀಲನೆ ಮಾಡೋಣ.

4.50 ಪಿ.ಎಂ.

ಸರ್ಕಾರದ ಅಧಿಕಾರಿಗಳು ಅರ್ಜಿಯನ್ನು ಭರ್ತಿ ಮಾಡಿಸಿ ನ್ಯಾಯಾಲಯದ ಮುಂದೆ ಹಾಕಿಸಿರತಕ್ಕಂಥಾದ್ದನ್ನು ವಾಪಸ್ಸು ತರುವಂಥ ಪರಿಸ್ಥಿತಿಗೆ ಜನ ಮುಂದಾದರೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ವಿರೋಧ ಪಕದ ಶಾಸಕರಿಂದ ನೀವು ಏನು ನಿರೀಕ್ಷೆ ಮಾಡುತ್ತೀರಿ? ನಿಮ್ಮನ್ನು ನಾವು ಹೊಗಳಬೇಕಾಗಿತ್ತೋ?

ಶ್ರೀ ಸಿ. ಬೈರೇಗೌಡ : ವಿರೋಧಕ್ಕೋಸ್ಕರ ನೀವು ವಿರೋಧ ಮಾಡಿಕೊಂಡು ಹೋದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ವಿರೋಧಕ್ಕೋಸ್ಕರ ವಿರೋಧ ಮಾಡುತ್ತೇವೆ ಎಂದರೆ ಅದಕ್ಕೆ ಉತ್ತರವಿಲ್ಲ. ಅದಕ್ಕೆ ನಮ್ಮ ತಿರಸ್ಕಾರ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಕೇಳಿದ್ದೇನೆಂದರೆ, ಎಕ್ಸ್‌ಟ್ರಾ ಲಾಂಗ್ ಸ್ಟೇಪಲ್ ಕಾಟನ್ ಅಂದರೆ 80 ಕೌಂಟ್‌ನ ಮೇಲೆ ಇದ್ದಂಥ ಹತ್ತಿಯನ್ನು ಬೆಳೆಯಲು ಕರ್ನಾಟಕ ಪ್ರಸಿದ್ಧಿ ಪಡೆದಿತ್ತು. ನಂತರ ಬಂದಂಥ ತಳಿಗಳು ಬಹಳ ಕನಿಷ್ಟ ದರ್ಜೆಯವುಗಳಾಗಿದ್ದು ಈಗ 40 ಕೌಂಟನ್ನೂ ಬೆಳೆಯುವಂಥ ಯೋಗ್ಯ ಹತ್ತಿ ಬೀಜ ದೊರೆಯುತ್ತಿಲ್ಲ. ಆ ಒಂದು ಬೀಜದ ಅಭಿವೃದ್ಧಿಗೆ ಅಥವಾ ಅಪ್‌ಗ್ರೇಡೇಷನ್‌ಗೆ ಆ ಮಟ್ಟದ ಎಕ್ಸ್‌ಟ್ರಾ ಲಾಂಗ್ ಸ್ಟೇಪಲ್ ಬೆಳೆಯುವಂಥ ಹೊಸ ತಳಿ ಹತ್ತಿಬೀಜವನ್ನು ಕಂಡುಹಿಡಿಯಲು ಅಥವಾ ಅದನ್ನು ಹೊರತರಲು ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರ ಹೇಳಬೇಕಾದರೆ ನಾನು ವಿಸ್ತಾರವಾಗಿ ಹೇಳಬೇಕಾಗುತ್ತದೆ. ಏಕೆಂದರೆ, ಈಗ ಪ್ರಪಂಚದಲ್ಲಿ ಫ್ಯಾಷನ್ ಬದಲಾವಣೆಯಾಗಿದೆ. ಮೊದಲು ಢಾಕಾ ಮಸ್ಲಿನ್ ಬಟ್ಟೆ ಎಂದು ಇತ್ತು. ಅದಕ್ಕೆ ವಿಶೇಷವಾದಂಥ ಹತ್ತಿಯನ್ನು ಬೆಳೆಯಬೇಕಾಗಿತ್ತು. ಈಗ ಢಾಕಾ ಮಸ್ಲಿನ್ ಬಟ್ಟೆ ಹೋಗಿ ಜೀನ್ಸ್ ಪ್ಯಾಂಟ್ ಬಂದಿವೆ. ಈಗ ಜೀನ್ಸ್ ಹಾಕುತ್ತಿದ್ದಾರೆ. ಜೀನ್ಸ್ ಬಟ್ಟೆಗೆ ಲಾಂಗ್ ಸ್ಟೇಪಲ್ ಕಾಟನ್ ಆಗುವುದಿಲ್ಲ ಅದಕ್ಕೆ ದಪ್ಪವಾಗಿಯ ಶಾರ್ಟ್ ಸ್ಟೇಪಲ್ ಬೇಕಾಗುತ್ತದೆ. ಹೀಗೆ ಇವತ್ತು ಫ್ಯಾಷನ್ ಬದಲಾವಣೆಯಾಗಿದೆ. ಆದ್ದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಯಾವ ಹತ್ತಿಗೆ ಇದೆ, ಆ ರೀತಿಯ ಹತ್ತಿಯ ತಳಿಗಳನ್ನು ಉತ್ಪಾದನೆ ಮಾಡಲು ನಾವು ಪ್ರಯತ್ನ ನಡೆಸಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಕೆಲವು ತಳಿಗಳಲ್ಲಿ ಕ್ವಾಲಿಟಿ ಡಿಟೇರಿಯೊರೇಟ್ ಆಗಿದೆ ಎಂದು ನೀವು ಹೇಳಿರತಕ್ಕಂಥಾದ್ದು ಆಗಿರುವುದು ನಿಜ. ಅದಕ್ಕಾಗಿ ಕ್ವಾಲಿಟಿಯನ್ನು ಅಪ್‌ಗ್ರೇಡ್ ಮಾಡತಕ್ಕಂಥ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಈಗಾಗಲೇ ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೂಚನೆ ಕೊಟ್ಟಿದ್ದೇನೆ. ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನು ಕರೆದು, ಅವರೊಂದಿಗೆ ಸಭೆ ನಡೆಸಿ, ಅವರಿಗೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಕ್ವಾಲಿಟಿ ವಿಷಯದಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಕ್ವಾಲಿಟಿ ಕೀಪ್ ಅಪ್ ಮಾಡುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸಾಂಗ್ಲಿ ಕಡೆಯಿಂದ ಗೊಬ್ಬರ ಬರುತ್ತದೆ ಎಂದು ಹೇಳಿದರು. ಇದು ಏಕೆಂದು ನನಗೂ ಅರ್ಥವಾಗುತ್ತಿಲ್ಲ. ಏಕೆಂದರೆ, ಇವತ್ತು ಗೊಬ್ಬರಕ್ಕೆ ಇಡೀ ದೇಶದಲ್ಲಿ ಒಂದೇ ಬೆಲೆಯನ್ನು ನಿಗದಿ ಮಾಡುತ್ತಾರೆ. ಅದು ಮಹಾರಾಷ್ಟ್ರ ಆಗಿರಬಹುದು ಅಥವಾ ಕರ್ನಾಟಕವಾಗಿರಬಹುದು, ಒಂದೇ ಬೆಲೆ ಇರುತ್ತದೆ. ನಾವು ಗೊಬ್ಬರದ ಮೇಲಿನ ಸೇಲ್ಸ್ ಟ್ಯಾಕ್ಸನ್ನು ಕಡಿಮೆ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಇವತ್ತು ಸೇಲ್ಸ್ ಟ್ಯಾಕ್ಸ್ ಇಲ್ಲ. ವಹಿವಾಟು ತೆರಿಗೆಯನ್ನು (ಟರ್ನ್ ಓವರ್ ಟ್ಯಾಕ್ಸ್) ಬಿಟ್ಟರೆ ಇನ್ನೂ ಯಾವ

ತೆರಿಗೆಯೂ ಇವತ್ತು ನಮ್ಮ ರಾಜ್ಯದಲ್ಲಿ ಇಲ್ಲ. ಆದ್ದರಿಂದ ನಮ್ಮ ರಾಜ್ಯದಲ್ಲಾಗಲೀ, ಸಾಂಗಿಯಲ್ಲಾಗಲೀ, ಮಹಾರಾಷ್ಟ್ರದಲ್ಲಾಗಲೀ ಗೊಬ್ಬರ ಒಂದೇ ಬೆಲೆಯಲ್ಲಿ ದೊರೆಯಬೇಕಾಗುತ್ತದೆ. ಆದ್ದರಿಂದ ಅಲ್ಲಿಂದ ಏಕೆ ಗೊಬ್ಬರ ಬರುತ್ತಿದೆ ಎನ್ನುವುದು ನನಗಂತೂ ಅರ್ಥವಾಗುತಿಲ್ಲ. ಆ ರೀತಿಯಾಗಿ ಬೇರೆ ಕಡೆಯಿಂದ ಸರಿಯಾಗಿರದೇ ಇರತಕ್ಕಂಥ ಗೊಬ್ಬರ ಬರತಕ್ಕಂಥಾದ್ದು ಇದ್ದರೆ, ಅದು ಸಾಂಗ್ಲಿಯಿಂದ ಇರಬಹುದು, ಬಿಜಾಪುರ ಕಡೆಯಿಂದ ಇರಬಹುದು, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತಂದಿದ್ದು ಏನೆಂದರೆ, ಸಾಂಗ್ಲಿಯಲ್ಲಿ ಎರಡು ರೀತಿಯ ಗೊಬ್ಬರ ಸಿಗುತ್ತಿದೆ. ಒಂದು ಒಳ್ಳೆಯ ಗೊಬ್ಬರ. ಅದಕ್ಕೆ ನಮ್ಮ ಮತ್ತು ಅವರ ರೇಟ್‌ಗಳಲ್ಲಿ ವ್ಯತ್ಯಾಸ ಇರುವುದಿಲ್ಲ. ಇನ್ನೊಂದು ರೀತಿಯ ಗೊಬ್ಬರ ಬರುತ್ತದೆ. ಅದು ಗೊಬ್ಬರದ ರೂಪದಲ್ಲಿರತಕ್ಕಂಥ ಮಣ್ಣು ಅಥವಾ ಸ್ಪೂರಿಯಸ್ ಗೊಬ್ಬರ. ಅದು ಸುಮಾರು 50 ಪಾಲಿನಷ್ಟು ಯಾವುದೇ ಲೆಕ್ಕ ಇಲ್ಲದೇ ಬರುತ್ತಿದೆ. ಅದು ಉದ್ದರಿ ರೂಪದಲ್ಲಿ ರೈತರಿಗೆ ಹೋಗುತ್ತದೆ. ರೈತ ಅದನ್ನು ಹಾಕಿದರೆ ಬೆಳೆ ಹೋಗುತ್ತದೆ. ಹಾಗಾಗಿ ಅನೇಕ ರೀತಿಯಿಂದ ರೈತ ತೊಂದರೆಗಳನ್ನು ಪಡುತ್ತಿದ್ದಾನೆ.

ಶ್ರೀ ಸಿ. ಬೈರೇಗೌಡ : ಎಲ್ಲಿಂದ ಕಳಪೆ ದರ್ಜೆಯ ಗೊಬ್ಬರ ಬರುತ್ತದೆ, ಅದನ್ನು ತಡೆಗಟ್ಟಿ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಶಿವಾನಂದ ಪಾಟೀಲ್‌ರವರು ಇನ್‌ಷೂರೆನ್ಸ್ ಬಗ್ಗೆ ಹೇಳಿದ್ದಾರೆ. ಇದನ್ನು ನಾನು ಈಗಾಗಲೇ ಪಸ್ತಾಪ ಮಾಡಿದ್ದೇನೆ. ನಾವು ಇದನ್ನು ಪ್ರಾಯೋಗಿಕವಾಗಿ ಕಾರ್ಯಗತ ಮಾಡಿರತಕ್ಕಂಥಾದ್ದು. ಇದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೇ ಸೇರಿ ಮಾಡಿರತಕ್ಕಂಥಾದ್ದು. ಕೆಲವು ರೈತರು ಇನ್ನೂ ಅದರಲ್ಲಿ ನೋಂದಾಯಿಸಿಕೊಂಡಿಲ್ಲ ಎನ್ನುವುದೂ ಸಹ ನನ್ನ ಗಮನಕ್ಕೆ ಬಂದಿದೆ. ಅದಕ್ಕೆ ನಿಗದಿಯಾದಂಥ ವೇಳೆಯನ್ನು ಪುನರ್ ವಿಮರ್ಶೆ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಲೂ ಸಹ ನಾನು ಪ್ರಯತ್ನಪಟ್ಟೆ. ಆದರೆ ಕೇಂದ್ರ ಸರ್ಕಾರವದರು ಒಪ್ಪದೇ ಇರುವ ಕಾರಣಕ್ಕಾಗಿ ಅದನ್ನು ಮಾಡಲು ಸಾಧ್ಯವಾಗಲಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ವೈಯಕ್ತಿಕವಾಗಿ ನಾನು ದೆಹಲಿಗೆ ಹೋದಂಥ ಸಂದರ್ಭದಲ್ಲಿ ಸಹ ಆ ಇಲಾಖೆಯ ಅಧಿಕಾರಿಗಳಿಗೂ ಇದನ್ನು ಹೇಳಿದ್ದೇನೆ. ಅವತ್ತು ನಾವು ಮಂತ್ರಿಗಳನ್ನು ಭೇಟಿ ಮಾಡಲು ಆಗಲಿಲ್ಲ. ಅವರಿಗೆ ಕೂಡ ಇದನ್ನು ಮಾಡಬೇಕು ಎಂದು ಹೇಳಿದ್ದೇನೆ. ಆದರೆ ಅವರು ಇದಕ್ಕೆ ಒಪ್ಪಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಪ್ರತಾಪಚಂದ್ರ ಶೆಟ್ಟಿಯವರು, ತಾಂತ್ರಿಕ ಪರಿಣತಿ ಇಲ್ಲದೇ ಇವರು ಮಾಡುತ್ತಾರೆ ಎಂದು ಹೇಳಿದರು. ಅದೆಲ್ಲಾ ಹಳೆಯ ಕಾಲದ್ದು. ಇವೆಲ್ಲಾ ನಿಮ್ಮ ಕಾಲದಲ್ಲಿ ನಡೆದಿರತಕ್ಕಂಥಾದ್ದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಯಾರ ಕಾಲದಲ್ಲೇ ಆಗಲಿ ಇದನ್ನು ಮಾಡುವುದು ಸರಿಯೇ? ಈಗ ಏನು ಮಾಡುತ್ತಿದ್ದಾರೆ?

ಶ್ರೀ ಸಿ. ಬೈರೇಗೌಡ : ನಮಗೆ ಎಲ್ಲವೂ ಗೊತ್ತಿದೆ. ಈಗ ಹೇಗಿದೆ ಎನ್ನುವುದನ್ನು ನೀವು ಹೋಗಿ ನೋಡಿಕೊಂಡು ಬನ್ನಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನೀವು ಗೊತ್ತಿದೆ ಎಂದು ಹೇಳಿದ ಕೂಡಲೇ ಎಲ್ಲವೂ ಮುಚ್ಚಿ ಹೋಗುತ್ತದೆಯೇ?

ಶ್ರೀ ಸಿ. ಬೈರೇಗೌಡ : ಹೋದ ಭಾನುವಾರ ಅಲ್ಲ, ಅದರ ಹಿಂದಿನ ಭಾನುವಾರ ನಾನು ಅಲ್ಲೇ ಇದ್ದೆ. ನಾನು ಹೋಗಿ ನೋಡಿದ್ದೇನೆ. ಈಗ ನೀವು ಹೋಗಿ ಗುಣಮಟ್ಟ ಹೇಗಿದೆ ಎನ್ನುವುದನ್ನು ದಯವಿಟ್ಟು ನೋಡಿಕೊಂಡು ಬಂದು ಹೇಳಿ ನಾನೇ ಕಣ್ಣಾರೆ ನೋಡಿದಂತೆ ಈಗ ನಡೆಯುತ್ತಿರುವಂಥ ಕೆಲಸಕಾರ್ಯಗಳ ಗುಣಮಟ್ಟ ಚೆನ್ನಾಗಿ ಇದೆ. ಅದರಲ್ಲೇನಾದರೂ ವ್ಯತ್ಯಾಸವಿದ್ದರೆ, ನೀವು ಮಾಹಿತಿಯನ್ನು ಕೊಡುವುದಾದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ನಮ್ಮ ಹತ್ತಿರ ಯಾರ ಮೂಲಾಜೂ ಇಲ್ಲ. ಮುಲಾಜು ಇಲ್ಲದೇ, ಅವರು ಯಾರೇ ಆಗಿರಲಿ ಅಂಥ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅಂಥ ಕೆಲಸ ಹಿಂದೆ ಆಗಿದ್ದಿದ್ದರೆ ಇವತ್ತು ಈ ಪರಿಸ್ಥಿತಿ ಇರುತ್ತಿರಲಿಲ್ಲ ಎನ್ನುವುದನ್ನು ನಾನು ವಿನಯದಿಂದ ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಈ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡಬೇಕು ಎಂದು ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಶ್ನೆಯನ್ನು ಕೇಳಬಹುದೇ? ಭೂಸಾರ ಸಂರಕ್ಷಣೆಯಲ್ಲಿ ತಾಂತ್ರಿಕ ತರಬೇತಿಯನ್ನು ಹೊಂದದೇ ಇರತಕ್ಕಂಥವರು ವೆಂಟೆಡ್ ಡ್ಯಾಮನ್ನು ಕಟ್ಟುತ್ತಿದ್ದಾರೆ. ಅವರು ಅಂದಾಜು ಪಟ್ಟಿಯನ್ನು ಹೇಗೆ ತಯಾರು ಮಾಡುತ್ತಾರೆ? ಹೇಗೆ ಕೆಲಸ ಮಾಡುತ್ತಾರೆ? ತಾವು ಏಕೆ ಇದನ್ನು ತಮ್ಮ ಮೈಮೇಲೆ ಹಾಕಿಕೊಂಡಿರೋ ನನಗೆ ಗೊತ್ತಿಲ್ಲ. ನಾನು ಹೇಳಿರತಕ್ಕಂಥಾದ್ದು ತಮ್ಮ ಇಲಾಖೆಯ ಬಗ್ಗೆ. ಹಿಂದೆ ಆಗಿದೆ ಎನ್ನುವುದನ್ನು ಹೇಳಿದ್ದೀರಿ, ಈಗ ಆಗುತ್ತಿದೆ ಎನ್ನುವುದನ್ನೂ ಹೇಳಿದ್ದೀರಿ. ತಾವು ಇದನ್ನು ತಮ್ಮ ಮೈಮೇಲೆ ಏಕೆ ಹಾಕಿಕೊಂಡಿರೆಂದು ಗೊತ್ತಿಲ್ಲ. ನಾನು ವ್ಯವಸ್ಥೆಗಳು, ಇಲಾಖೆಗಳು ಮಾಡಿರತಕ್ಕಂಥಾದ್ದನ್ನು ಹೇಳಿದ್ದೇನೆ. ಅದನ್ನು ಹೇಳಬಾರದು ಎನ್ನುವುದು ಸರಿಯಲ್ಲ. ನನ್ನ ಭಾವನೆಗಳನ್ನು, ನನ್ನ ಅನಿಸಿಕೆಗಳನ್ನು ನಾನು ಹೇಳುತ್ತೇನೆ. ಅದನ್ನು ಹೇಳತಕ್ಕಂಥ ವ್ಯವಸ್ಥೆಯೂ ಇದೆ.

ಅಧ್ಯಕ್ಷರು : ಹೆಚ್ಚು ಹೆಚ್ಚು ಹೇಳಬೇಕು ಎಂದೇ ಅವರು ಅಪೇಕ್ಷೆ ಪಡುವುದು.

ಶ್ರೀ ಶ್ರೀರಂಗದೇವರಾಯಲು : ಗಂಗಾವತಿಯಲ್ಲಿ ಯೀಲ್ಡ್ ಕಡಿಮೆಯಾಗಿದೆ. ಅದಕ್ಕೋಸ್ಕರ ಅಲ್ಲಿ ಒಂದು ರೀಸರ್ಚ್ ಸೆಂಟರ್‌ಅನ್ನು ಮಾಡಿ ಯೀಲ್ಡ್ ಜಾಸ್ತಿ ಮಾಡಲು ಮತ್ತು ಏತಕ್ಕೋಸ್ಕರ ಯೀಲ್ಡ್ ಕಡಿಮೆಯಾಗಿದೆ ಎನ್ನುವುದನ್ನು ಕಂಡುಹಿಡಿಯಲು ಒಂದು ರೀಸರ್ಚ್ ಸೆಂಟರ್‌ಅನ್ನು ಮಾಡಬೇಕೆಂದು ಕೇಳುತ್ತೇನೆ. ಹಿಂದೆ 50 ಚೀಲ ನೆಲ್ಲು ಬೆಳೆಯುತ್ತಿದ್ದ ಕಡೆ ಈಗ ಬರೀ 80 ಚೀಲ ಬೆಳೆಯುತ್ತಿದ್ದಾರೆ. 50 ಚೀಲ ಕಡಲೆ ಬರುತ್ತಿದ್ದ ಕಡೆ ಈಗ ಕೇವಲ 15 ಚೀಲ ಬರುತ್ತಿದೆ. ಆದ್ದರಿಂದ ಅಲ್ಲಿಗೆ ಒಂದು ರೀಸರ್ಚ್ ಸೆಂಟರ್‌ಅನ್ನು ಕೊಡಬೇಕು. ಅದಕ್ಕೆ ಬೇಕಾದಂಥ ಕಟ್ಟಡಗಳು

ಗಂಗಾವತಿಯಲ್ಲಿ ಇವೆ. ಗ್ರಾಮ ಸೇವಕರ ತರಬೇತಿ ಕೇಂದ್ರವಿದೆ, ಲೆಕ್ಚರ್ ಹಾಲ್‌ಗಳಿವೆ. ಆದ್ದರಿಂದ ಇದನ್ನು ಏಕೆ ಮಾಡಬಾರದು ಎಂದು ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಈ ವಿಷಯದ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ನಾನು ನೋಡುತ್ತೇನೆ.

ಅಧ್ಯಕ್ಷರು : ಈಗ ತೋಟಗಾರಿಕೆ ಸಚಿವರಿಂದ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

ತೋಟಗಾರಿಕೆ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ, ಕೃಷಿ ಸಚಿವರು ಸತತವಾಗಿ ಸುಮಾರು 5-6 ಗಂಟೆಗಳ ಕಾಲ ಈಗಾಗಲೇ ಸುದೀರ್ಘವಾದಂಥ ಉತ್ತರವನ್ನು ನೀಡಿದ್ದಾರೆ. ಕೃಷಿ ಮತ್ತು ತೋಟಗಾರಿಕೆಗಳು ಒಂದು ರೀತಿಯಲ್ಲಿ ಅವಳಿ-ಜವಳಿ ಇದ್ದ ಹಾಗೆ. ಅದಿಲ್ಲದೇ ಇದಿಲ್ಲ, ಇದಿಲ್ಲದಿದ್ದರೆ ಅದು ಇರುವುದಿಲ್ಲ. ಇವೆರಡೂ ಒಟ್ಟೊಟ್ಟಿಗೆ ಹೋಗಬೇಕಾಗುತ್ತದೆ. ಅವರು ಸುಮಾರು ಐದು ಗಂಟೆ ಮಾತನಾಡಿದ್ದಾರೆ. ನಾನು ಅಷ್ಟು ಮಾತನಾಡುವುದಕ್ಕೆ ಹೋಗುವುದಿಲ್ಲ. ಸಮಯದ ಅಭಾವವಿರುವುರಿಂದ ಕನಿಷ್ಟ ಒಂದು ಗಂಟೆಯೊಳಗೆ ನಮ್ಮ ಇಲಾಖೆಯಲ್ಲಿರತಕ್ಕಂಥ ಕಾರ್ಯಕಲಾಪಗಳ ಬಗ್ಗೆ ಮತ್ತು ಇಲಾಖೆಯ ಮಹತ್ವದ ಬಗ್ಗೆ ಈ ಸದನದ ಮುಂದೆ ಹೇಳುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಮಾತನಾಡಿದ್ದಾರೆ. ಸನ್ಮಾನ್ಯ ವಿಜಯ್‌ಕುಮಾರ್ ಖಂಡ್ರೆಯವರು, ಹಿರಿಯರಾದಂಥ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು, ಚಂದ್ರಕಾಂತ ಬೆಲ್ಲದ್‌ರವರು, ಪುಟ್ಟಣ್ಣಯ್ಯನವರು, ಮಾಧುಸ್ವಾಮಿಯವರು, ಜಯರಾಮಶೆಟ್ಟಿಯವರು ಮತ್ತು ಬಸವರಾಜುರವರು ಇವರೆಲ್ಲರೂ ಸಾಕಷ್ಟು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ ಮತ್ತು ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಟೀಕೆ ಟಿಪ್ಪಣಿಗಳು ನಮಗೆ ಅನುಕೂಲ -ವಾಗುತ್ತವೆ. ಏಕೆಂದರೆ, ನಮ್ಮ ಇಲಾಖೆಯಲ್ಲಿ ನಾವು ಮಾಡುವ ತಪ್ಪುಗಳನ್ನು ತಿದ್ದಿಕೊಂಡು, ಅದನ್ನು ಸುಧಾರಿಸಿಕೊಂಡು ಹೋಗಲು ಸಹಾಯಕವಾಗುತ್ತವಾದ್ದರಿಂದ ನಾನು ಅವರಿಗೆ ಕೃತಜ್ಞತೆಗಳನ್ನರ್ಪಿಸುತ್ತೇನೆ. ನಾನು ರಾಜಕೀಯದಲ್ಲಿ ಬೆಳೆಯುತ್ತಿರುವವರು, ಇಲಾಖೆಯ ಜವಾಬ್ದಾರಿಯನ್ನು ಮೊಟ್ಟ ಮೊದಲ ಬಾರಿಗೆ ಹೊತ್ತಿರುವವನು, ಅಲ್ಲಿಯ ಆಗುಹೋಗುಗಳನ್ನು ತಿಳಿದುಕೊಳ್ಳಲು ಕಾತುರನಾಗಿದ್ದೇನೆ. ಆ ದಿಸೆಯಿಂದ ಇವತ್ತು ಇದರ ಬಗ್ಗೆ ಸಂಕ್ಷಿಪ್ತವಾಗಿ ಉತ್ತರವನ್ನು ನೀಡಬೇಕಾಗಿದೆ. ಬಹಳಷ್ಟು ಹೇಳಬೇಕಾಗಿರುವುದಿದ್ದರೂ ಕೂಡ, ಸಾಕಷ್ಟು ಬೇಗ ಹೇಳಿ ಮುಗಿಸಲು ಪ್ರಯತ್ನಪಡುತ್ತಿದ್ದೇನೆ. ಇಂದು ತೋಟಗಾರಿಕೆ ಇಲಾಖೆ ರಾಷ್ಟ್ರದಲ್ಲೇ ನಾವೆಲ್ಲರೂ ಹೆಮ್ಮೆಪಡುವಂಥದ್ದಾಗಿದೆ. ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಪ್ರಥಮ ಸ್ಥಾನದಲ್ಲಿದೆ. ಇದಕ್ಕೆ ನಮ್ಮ ಹಿಂದಿನ ಶ್ರೀ ಎಂ.ಎಚ್. ಮರಿಗೌಡರನ್ನು ನಾವು ಸ್ಮರಿಸಿಕೊಳ್ಳಬೇಕಾಗಿದೆ. ಆ ಪುಣ್ಯಾತ್ಮ ಯಾವುದೇ ರೂಲ್ಸ್, ರೆಗ್ಯುಲೇಷನ್ಸ್ ನೋಡದೆ, ಸರ್ಕಾರವನ್ನೇ ವಿರೋಧ ಮಾಡಿಕೊಂಡು ಮುನ್ನುಗ್ಗಿ ಸುಮಾರು 17 ಸಾವಿರ ಹೆಕ್ಟೇರ್ ಜಮೀನನ್ನು ತೋಟಗಾರಿಕೆ ಇಲಾಖೆಯಲ್ಲಿ ತಂದಿದ್ದಾರೆ.